भारत का राजपत्र
The Gazette of India

# ಭಾರತ ರಾಜಪತ್ರ

**(Extraordinary)**
**(ವಿಶೇಷ ಸಂಚಿಕೆ)**

**भाग IX  अनुभाग 1**
**PART IX  SECTION 1**
**ಭಾಗ IX  ವಿಭಾಗ 1**

**प्राधिकार से प्रकाशित**
**Published by Authority**
**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ**

| | | |
|---|---|---|
| सं 1, नई दिल्ली, बुधवार, 26 मार्च, 2025 | फाल्गुन 27, 1946 (शक) | खंड.56 |
| No.1, New Delhi, Wednesday, March 26, 2025 | Phalguna 27, 1946 (saka) | Vol. 56 |
| ನಂ.1, ನವದೆಹಲಿ, ಬುಧವಾರ, ಮಾರ್ಚ್ 26, 2025 | ಫಾಲ್ಗುಣ 27, 1946 (ಶಕ) | ಸಂಪುಟ.56 |

**Ministry of Law and Justice**
(Legislative Department)
New Delhi, 26th March, 2025

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

**(ವಿಧಾಯೀ ಇಲಾಖೆ)**

**ನವದೆಹಲಿ, 26ನೇ ಮಾರ್ಚ್, 2025**

The Translation in Kannada of the following Acts, namely:- (1) THE BIOLOGICAL DIVERSITY ACT, 2002 (NO.18 OF 2003), (2) THE FISCAL RESPONSIBILITY AND BUDGET MANAGEMENT ACT, 2003 (NO.39 OF 2003), (3) THE TRANSGENDER PERSONS (PROTECTION OF RIGHTS) ACT, 2019 (NO.40 OF 2019), (4) THE WHISTLE BLOWERS PROTECTION ACT, 2014 (NO.17 OF 2014) - is hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ:– (1) ಜೈವಿಕ ವೈವಿಧ್ಯತೆ ಅಧಿನಿಯಮ, 2002 (2003ರ ಸಂಖ್ಯೆ 18), (2) ವಿತ್ತೀಯ ಜವಾಬ್ದಾರಿ ಮತ್ತು ಆಯವ್ಯಯ ನಿರ್ವಹಣೆ ಅಧಿನಿಯಮ, 2003 (2003ರ ಸಂಖ್ಯೆ 39), (3) ತೃತೀಯಲಿಂಗಿ ವ್ಯಕ್ತಿಗಳ (ಹಕ್ಕುಗಳ ಸಂರಕ್ಷಣೆ) ಅಧಿನಿಯಮ, 2019 (2019ರ ಸಂಖ್ಯೆ 40), (4) ಮಾಹಿತಿದಾರರ ಸಂರಕ್ಷಣಾ ಅಧಿನಿಯಮ, 2014 (2014ರ ಸಂಖ್ಯೆ 17)– ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಮಾಹಿತಿದಾರರ ಸಂರಕ್ಷಣಾ ಅಧಿನಿಯಮ, 2014

## (2014ರ ಸಂಖ್ಯೆ 17)

*[9ನೇ ಮೇ, 2014.]*

ಯಾರೇ ಲೋಕ ನೌಕರನ ವಿರುದ್ಧ ಯಾವುದೇ ಭ್ರಷ್ಟಾಚಾರದ ಆರೋಪವನ್ನು ಅಥವಾ ಉದ್ದೇಶಪೂರ್ವಕವಾಗಿ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿರುವುದನ್ನು ಅಥವಾ ವಿವೇಚನೆಯನ್ನು ಉದ್ದೇಶಪೂರ್ವಕವಾಗಿ ದುರುಪಯೋಗಪಡಿಸಿಕೊಂಡಿರುವುದನ್ನು ಬಹಿರಂಗಪಡಿಸುವುದಕ್ಕೆ ಸಂಬಂಧಪಟ್ಟ ದೂರುಗಳನ್ನು ಸ್ವೀಕರಿಸಲು ಮತ್ತು ಅಂಥ ಬಹಿರಂಗಪಡಿಸಿರುವಿಕೆ ಬಗ್ಗೆ ವಿಚಾರಣೆ ಮಾಡಲು ಅಥವಾ ವಿಚಾರಣೆ ಮಾಡುವಂತೆ ಮಾಡಲು ಅಥವಾ ಅಂಥ ದೂರು ನೀಡಿರುವ ವ್ಯಕ್ತಿಯನ್ನು ಬಲಿಪಶು ಮಾಡುವುದರ ವಿರುದ್ಧ ಸಾಕಷ್ಟು ರಕ್ಷಣೆಯನ್ನು ಒದಗಿಸಲು, ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸುವ ಹಾಗೂ ಅದಕ್ಕೆ ಸಂಬಂಧಪಟ್ಟ ಮತ್ತು ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ಅರವತ್ತೈದನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

### ಅಧ್ಯಾಯ I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಮಾಹಿತಿದಾರರ ಸಂರಕ್ಷಣಾ ಅಧಿನಿಯಮ, 2014 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ಸಂಬಂಧಿಸಿದಂತೆ ಮಾಡಿದ ಯಾವುದೇ ಉಪಬಂಧದಲ್ಲಿನ ಯಾವುದೇ ಉಲ್ಲೇಖವನ್ನು ಆ ಉಪಬಂಧ ಜಾರಿಗೆ ಬರುವುದಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**2. ಈ ಅಧಿನಿಯಮದ ಉಪಬಂಧಗಳನ್ನು ವಿಶೇಷ ಸಂರಕ್ಷಣಾ ತಂಡಕ್ಕೆ ಅನ್ವಯಿಸದಿರುವುದು.–** ವಿಶೇಷ ಸಂರಕ್ಷಣಾ ತಂಡ ಅಧಿನಿಯಮ, 1988 (1988ರ 34)ರ ಮೇರೆಗೆ ರಚಿಸಿದ ವಿಶೇಷ ಸಂರಕ್ಷಣಾ ತಂಡವಾಗಿರುವ ಒಕ್ಕೂಟದ ಸಶಸ್ತ್ರ ಪಡೆಗಳಿಗೆ ಈ ಅಧಿನಿಯಮದ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ.

**3. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಕೇಂದ್ರ ಜಾಗೃತ ಆಯೋಗ" ಎಂದರೆ, ಕೇಂದ್ರ ಜಾಗೃತ ಆಯೋಗ ಅಧಿನಿಯಮ, 2003 (2003ರ 45)ರ 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಚಿಸಿದ ಆಯೋಗ;

(ಬಿ) "ಸಕ್ಷಮ ಪ್ರಾಧಿಕಾರ" ಎಂದರೆ:–

(i) ಒಕ್ಕೂಟ ಮಂತ್ರಿಮಂಡಲದ ಸದಸ್ಯರಿಗೆ ಸಂಬಂಧಿಸಿದಂತೆ ಪ್ರಧಾನಮಂತ್ರಿ;

(ii) ಸಂಸತ್ತಿನ ಸದಸ್ಯರಿಗೆ ಸಂಬಂಧಿಸಿದಂತೆ, ಸಚಿವರನ್ನು ಹೊರತುಪಡಿಸಿ, ಸಂದರ್ಭಾನುಸಾರ ಅಂಥ ಸದಸ್ಯನು ರಾಜ್ಯಸಭೆಯ ಸದಸ್ಯನಾಗಿದ್ದರೆ ರಾಜ್ಯಸಭೆಯ ಸಭಾಪತಿ ಅಥವಾ ಅಂಥ ಸದಸ್ಯನು ಲೋಕಸಭೆಯ ಸದಸ್ಯನಾಗಿದ್ದರೆ ಲೋಕಸಭೆಯ ಅಧ್ಯಕ್ಷರು;

(iii) ರಾಜ್ಯ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಮಂತ್ರಿಮಂಡಲ ಸದಸ್ಯನಿಗೆ ಸಂಬಂಧಿಸಿದಂತೆ ಸಂದರ್ಭಾನುಸಾರ, ರಾಜ್ಯ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಮುಖ್ಯಮಂತ್ರಿ;

(iv) ರಾಜ್ಯ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ವಿಧಾನ ಪರಿಷತ್ತಿನ ಅಥವಾ ವಿಧಾನಸಭೆಯ ಸದಸ್ಯನಿಗೆ ಸಂಬಂಧಿಸಿದಂತೆ, ಸಚಿವರನ್ನು ಹೊರತುಪಡಿಸಿ, ಸಂದರ್ಭಾನುಸಾರ ಅಂಥ ಸದಸ್ಯ ವಿಧಾನ ಪರಿಷತ್ತಿನ ಸದಸ್ಯನಾಗಿದ್ದರೆ ವಿಧಾನ ಪರಿಷತ್ತಿನ ಸಭಾಪತಿ ಅಥವಾ ಅಂಥ ಸದಸ್ಯ ವಿಧಾನಸಭೆಯ ಸದಸ್ಯನಾಗಿದ್ದರೆ ವಿಧಾನ ಸಭೆಯ ಅಧ್ಯಕ್ಷರು;

(v) (ಎ) ಯಾವುದೇ ನ್ಯಾಯ ನಿರ್ಣಯ ಪ್ರಕಾರ್ಯಗಳನ್ನು, ತಾನಾಗಿಯೇ ಆಗಲಿ ಅಥವಾ ಯಾರೇ ವ್ಯಕ್ತಿಗಳ ನಿಕಾಯದ ಸದಸ್ಯನಾಗಿ ಆಗಲಿ ನಿರ್ವಹಿಸಲು ಕಾನೂನು ಮೂಲಕ ಅಧಿಕೃತಗೊಂಡ ಯಾರೇ ವ್ಯಕ್ತಿಯನ್ನು ಒಳಗೊಂಡಂತೆ, ಯಾರೇ ನ್ಯಾಯಾಧೀಶನಿಗೆ (ಸರ್ವೋಚ್ಚ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯದ ನ್ಯಾಯಾಧೀಶನನ್ನು ಹೊರತುಪಡಿಸಿ) ಸಂಬಂಧಿಸಿದಂತೆ; ಅಥವಾ

(ಬಿ) ಅಂಥ ನ್ಯಾಯಾಲಯವು ನೇಮಕ ಮಾಡಿದ ಸಮಾಪಕನನ್ನು, ಸ್ವೀಕರ್ತನನ್ನು ಅಥವಾ ಆಯುಕ್ತನನ್ನು ಒಳಗೊಂಡಂತೆ, ನ್ಯಾಯಾಡಳಿತ ಸಂಬಂಧದಲ್ಲಿ ಯಾವುದೇ ಕರ್ತವ್ಯ ನಿರ್ವಹಿಸಲು ನ್ಯಾಯಾಲಯದಿಂದ ಅಧಿಕೃತಗೊಂಡ ಯಾರೇ ವ್ಯಕ್ತಿಗೆ ಸಂಬಂಧಿಸಿದಂತೆ; ಅಥವಾ

(ಸಿ) ನ್ಯಾಯಾಲಯ ಅಥವಾ ಸಕ್ಷಮ ಸಾರ್ವಜನಿಕ ಪ್ರಾಧಿಕಾರವು ಯಾವ ಮಧ್ಯಸ್ಥಗಾರನಿಗೆ ಅಥವಾ ಇತರ ವ್ಯಕ್ತಿಗೆ ಯಾವ ವ್ಯಾಜ್ಯ ಅಥವಾ ವಿಷಯವನ್ನು ನಿರ್ಣಯಿಸುವುದಕ್ಕಾಗಿ ಅಥವಾ ವರದಿ ಮಾಡುವುದಕ್ಕಾಗಿ ಕಳುಹಿಸಲಾಗಿದೆಯೋ ಆ ಯಾರೇ ಮಧ್ಯಸ್ಥಗಾರ ಅಥವಾ ಇತರ ವ್ಯಕ್ತಿಗೆ ಸಂಬಂಧಿಸಿದಂತೆ

– ಉಚ್ಚ ನ್ಯಾಯಾಲಯ;

(vi) (ಎ) ಮಂತ್ರಿಗಳು, ಸಂಸತ್ತಿನ ಸದಸ್ಯರು ಮತ್ತು ಸಂವಿಧಾನದ 33ನೇ ಅನುಚ್ಛೇದದ (ಎ) ಖಂಡದಲ್ಲಿ ಅಥವಾ (ಬಿ) ಖಂಡದಲ್ಲಿ ಅಥವಾ (ಸಿ) ಖಂಡದಲ್ಲಿ ಅಥವಾ (ಡಿ) ಖಂಡದಲ್ಲಿ ಉಲ್ಲೇಖಿಸಿದ ಸದಸ್ಯರು ಅಥವಾ ವ್ಯಕ್ತಿಗಳನ್ನು ಹೊರತುಪಡಿಸಿ, ಕೇಂದ್ರ ಸರ್ಕಾರದ ಸೇವೆಯಲ್ಲಿರುವ ಅಥವಾ ಸಂಬಳದಲ್ಲಿರುವ ಅಥವಾ ಕೇಂದ್ರ ಸರ್ಕಾರದಿಂದ ಯಾವುದೇ ಸರ್ಕಾರಿ ಕರ್ತವ್ಯ ನಿರ್ವಹಿಸುವುದಕ್ಕಾಗಿ, ಫೀಜುಗಳು ಅಥವಾ ದಲ್ಲಾಳಿ ರೂಪದಲ್ಲಿ ಪರಿಶ್ರಮಧನ ಪಡೆಯುತ್ತಿರುವ ಅಥವಾ ಯಾವುದೇ ಕೇಂದ್ರ ಅಧಿನಿಯಮದ ಮೂಲಕ ಅಥವಾ ಮೇರೆಗೆ ಸ್ಥಾಪಿಸಿದ ಸೊಸೈಟಿ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಯಾವುದೇ ನಿಗಮ, ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಅಥವಾ ಅನುದಾನ ಪಡೆಯುತ್ತಿರುವ ಪ್ರಾಧಿಕಾರ ಅಥವಾ ನಿಕಾಯ ಅಥವಾ ಕಂಪನಿಗಳ ಅಧಿನಿಯಮ, 1956 (1956ರ 1)ರ 617ನೇ ಪ್ರಕರಣದಲ್ಲಿ ಪರಿಭಾಷಿಸಿದಂತೆ, ಕೇಂದ್ರ ಸರ್ಕಾರದ ಒಡೆತನದ ಅಥವಾ

ನಿಯಂತ್ರಣದಲ್ಲಿರುವ ಸರ್ಕಾರಿ ಕಂಪನಿಯ ಸೇವೆಯಲ್ಲಿರುವ ಅಥವಾ ಅದರಿಂದ ಸಂಬಳ ಪಡೆಯುತ್ತಿರುವ ಯಾರೇ ವ್ಯಕ್ತಿ; ಅಥವಾ

(ಬಿ) ಸಂಸತ್ತಿಗೆ ಅಥವಾ ರಾಜ್ಯ ವಿಧಾನಮಂಡಲಕ್ಕೆ ನಡೆಯುವ ಚುನಾವಣೆಗಳಿಗೆ ಸಂಬಂಧಿಸಿದಂತೆ ಮತದಾರರ ಪಟ್ಟಿಯನ್ನು ಸಿದ್ಧಪಡಿಸಲು, ಪ್ರಕಟಿಸಲು, ನಿರ್ವಹಿಸಲು ಅಥವಾ ಪರಿಷ್ಕೃತಗೊಳಿಸಲು ಅಥವಾ ಚುನಾವಣೆಗಳನ್ನು ನಡೆಸಲು ಅಥವಾ ಚುನಾವಣೆಯ ಭಾಗವಾಗಿ ಕಾರ್ಯನಿರ್ವಹಿಸಲು ಯಾರೇ ವ್ಯಕ್ತಿಯನ್ನು ಅವನ ಪದದ ಕಾರಣದಿಂದಾಗಿ ಅಧಿಕೃತಗೊಳಿಸಲಾಗಿದೆಯೋ ಆ ಪದವನ್ನು ಧಾರಣ ಮಾಡಿರುವ ವ್ಯಕ್ತಿಗೆ ಸಂಬಂಧಿಸಿದಂತೆ; ಅಥವಾ

(ಸಿ) ಯಾವುದೇ ಸರ್ಕಾರಿ ಕರ್ತವ್ಯವನ್ನು ನಿರ್ವಹಿಸಲು ಯಾರೇ ವ್ಯಕ್ತಿಯನ್ನು ಅವನ ಪದದ ಕಾರಣದಿಂದಾಗಿ ಅಧಿಕೃತಗೊಳಿಸಲಾಗಿದೆಯೋ ಅಥವಾ ಅಗತ್ಯಪಡಿಸಲಾಗಿದೆಯೋ ಆ ಪದವನ್ನು ಧಾರಣ ಮಾಡಿರುವ ವ್ಯಕ್ತಿಗೆ (ಮಂತ್ರಿಗಳು ಮತ್ತು ಸಂಸತ್ತಿನ ಸದಸ್ಯರನ್ನು ಹೊರತುಪಡಿಸಿ) ಸಂಬಂಧಿಸಿದಂತೆ; ಅಥವಾ

(ಡಿ) ಕೇಂದ್ರ ಸರ್ಕಾರದಿಂದ ಅಥವಾ ಕೇಂದ್ರ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ಯಾವುದೇ ನಿಗಮದಿಂದ ಅಥವಾ ಕಂಪನಿಗಳ ಅಧಿನಿಯಮ, 1956 (1956ರ 1)ರ 617ನೇ ಪ್ರಕರಣದಲ್ಲಿ ಪರಿಭಾಷಿಸಿದಂತೆ, ಕೇಂದ್ರ ಸರ್ಕಾರದ ಒಡೆತನ ಅಥವಾ ನಿಯಂತ್ರಣ ಹೊಂದಿರುವ ಅಥವಾ ಅನುದಾನ ಪಡೆದ ಯಾವುದೇ ಪ್ರಾಧಿಕಾರ ಅಥವಾ ನಿಕಾಯ ಅಥವಾ ಸರ್ಕಾರಿ ಕಂಪನಿಯಿಂದ ಯಾವುದೇ ಆರ್ಥಿಕ ನೆರವು ಪಡೆಯುತ್ತಿರುವ ಅಥವಾ ಪಡೆದುಕೊಂಡಿರುವ ಕೃಷಿ, ಕೈಗಾರಿಕೆ, ವ್ಯಾಪಾರ ಅಥವಾ ಬ್ಯಾಂಕ್ ವ್ಯವಹಾರದಲ್ಲಿ ತೊಡಗಿಸಿಕೊಂಡ ನೋಂದಾಯಿತ ಸಹಕಾರ–ಸಂಘದ ಅಧ್ಯಕ್ಷ, ಕಾರ್ಯದರ್ಶಿ ಅಥವಾ ಇತರ ಪದಾಧಿಕಾರಿಯಾಗಿರುವ ಯಾರೇ ವ್ಯಕ್ತಿಗೆ ಸಂಬಂಧಿಸಿದಂತೆ; ಅಥವಾ

(ಇ) ಯಾವುದೇ ಹೆಸರಿನಿಂದ ಕರೆಯಲಾಗುವ, ಯಾವುದೇ ಕೇಂದ್ರ ಸೇವಾ ಆಯೋಗ ಅಥವಾ ಮಂಡಳಿಯ ಅಧ್ಯಕ್ಷ, ಸದಸ್ಯ ಅಥವಾ ನೌಕರನಾಗಿರುವ ಅಥವಾ ಅಂಥ ಆಯೋಗ ಅಥವಾ ಮಂಡಳಿಯ ಪರವಾಗಿ ಯಾವುದೇ ಪರೀಕ್ಷೆಯನ್ನು ನಡೆಸುವುದಕ್ಕಾಗಿ ಅಥವಾ ಯಾವುದೇ ಆಯ್ಕೆ ಮಾಡುವುದಕ್ಕಾಗಿ ಅಂಥ ಆಯೋಗ ಅಥವಾ ಮಂಡಳಿಯು ನೇಮಕ ಮಾಡಿದ ಯಾವುದೇ ಆಯ್ಕೆ ಸಮಿತಿಯ ಸದಸ್ಯನಾಗಿರುವ ಯಾರೇ ವ್ಯಕ್ತಿಗೆ ಸಂಬಂಧಿಸಿದಂತೆ; ಅಥವಾ

(ಎಫ್) ಕೇಂದ್ರ ಅಧಿನಿಯಮದ ಮೂಲಕ ಸ್ಥಾಪಿಸಿದ ಅಥವಾ ಕೇಂದ್ರ ಸರ್ಕಾರವು ಸ್ಥಾಪಿಸುವ ಅಥವಾ ನಿಯಂತ್ರಿಸುವ ಅಥವಾ ಧನಸಹಾಯ ನೀಡುವ ಯಾವುದೇ ವಿಶ್ವವಿದ್ಯಾಲಯದ ಕುಲಪತಿ ಅಥವಾ ಯಾವುದಾದರೂ ಪದನಾಮದಿಂದ ಕರೆಯಲಾಗುವ ಯಾವುದೇ ಆಡಳಿತ ನಿಕಾಯದ ಸದಸ್ಯ, ಪ್ರಾಧ್ಯಾಪಕ, ಸಹ–ಪ್ರಾಧ್ಯಾಪಕ, ಸಹಾಯಕ ಪ್ರಾಧ್ಯಾಪಕ, ರೀಡರ್, ಉಪನ್ಯಾಸಕ ಅಥವಾ ಇತರ ಯಾರೇ ಶಿಕ್ಷಕ ಅಥವಾ ನೌಕರನಾಗಿರುವ ಯಾರೇ ವ್ಯಕ್ತಿಗೆ ಅಥವಾ ಪರೀಕ್ಷೆಗಳನ್ನು ಆಯೋಜಿಸುವುದಕ್ಕೆ ಮತ್ತು ನಡೆಸುವುದಕ್ಕೆ ಸಂಬಂಧಿಸಿದಂತೆ ಅಂಥ ವಿಶ್ವವಿದ್ಯಾಲಯವು ಅಥವಾ ಅಂಥ ಇತರ ಯಾವುದೇ ಸಾರ್ವಜನಿಕ ಪ್ರಾಧಿಕಾರವು ಯಾವ ವ್ಯಕ್ತಿ ಸೇವೆಗಳನ್ನು ಪಡೆದುಕೊಂಡಿರುವುದೋ ಆ ಯಾರೇ ವ್ಯಕ್ತಿಗೆ ಸಂಬಂಧಿಸಿದಂತೆ; ಅಥವಾ

(ಜಿ) ಕೇಂದ್ರ ಸರ್ಕಾರ ಅಥವಾ ಯಾವುದೇ ಸ್ಥಳೀಯ ಅಥವಾ ಇತರ ಸಾರ್ವಜನಿಕ ಪ್ರಾಧಿಕಾರದಿಂದ ಯಾವುದೇ ಆರ್ಥಿಕ ನೆರವನ್ನು ಪಡೆಯುವ ಅಥವಾ ಪಡೆದುಕೊಂಡು ಯಾವುದೇ ರೀತಿಯಲ್ಲಿ ಸ್ಥಾಪಿಸಿರುವ ಶೈಕ್ಷಣಿಕ, ವೈಜ್ಞಾನಿಕ, ಸಾಮಾಜಿಕ, ಸಾಂಸ್ಕೃತಿಕ ಅಥವಾ ಇತರ ಸಂಸ್ಥೆಯ ಪದಾಧಿಕಾರಿಯಾಗಿರುವ ಅಥವಾ ನೌಕರನಾಗಿರುವ ಯಾರೇ ವ್ಯಕ್ತಿಗೆ ಸಂಬಂಧಿಸಿದಂತೆ

– ಕೇಂದ್ರ ಸರ್ಕಾರವು ಅಧಿಸೂಚನೆ ಮೂಲಕ, ರಾಜಪತ್ರದಲ್ಲಿ ಈ ಅಧಿನಿಯಮದ ಮೇರೆಗೆ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಕೇಂದ್ರ ಜಾಗೃತಿ ಆಯೋಗ ಅಥವಾ ಇತರ ಯಾವುದೇ ಪ್ರಾಧಿಕಾರ;

(vii) (ಎ) ರಾಜ್ಯದ ಸಚಿವರು, ವಿಧಾನ ಪರಿಷತ್ತು ಮತ್ತು ವಿಧಾನಸಭೆಯ ಸದಸ್ಯರನ್ನು ಹೊರತುಪಡಿಸಿ, ರಾಜ್ಯ ಸರ್ಕಾರದ ಸೇವೆಯಲ್ಲಿರುವ ಅಥವಾ ಅದರಿಂದ ಸಂಬಳ ಪಡೆಯುವ ಅಥವಾ ಯಾವುದೇ ಸರ್ಕಾರಿ ಕರ್ತವ್ಯದ ಕಾರ್ಯನಿರ್ವಹಣೆಗಾಗಿ, ರಾಜ್ಯ ಸರ್ಕಾರದಿಂದ ಫೀಜುಗಳ ಅಥವಾ ದಲ್ಲಾಳಿ ರೂಪದಲ್ಲಿ ಪರಿಶ್ರಮಧನ ಪಡೆಯುತ್ತಿರುವ ಅಥವಾ ಪ್ರಾಂತೀಯ ಅಥವಾ ರಾಜ್ಯ ಅಧಿನಿಯಮದ ಮೂಲಕ ಅಥವಾ ಮೇರೆಗೆ ಸ್ಥಾಪಿಸಿದ ಸೊಸೈಟಿ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಯಾವುದೇ ನಿಗಮದ ಅಥವಾ ರಾಜ್ಯ ಸರ್ಕಾರದ ಸ್ವಾಮ್ಯದ ಅಥವಾ ನಿಯಂತ್ರಣದ ಅಥವಾ ಅನುದಾನ ಪಡೆದ ಪ್ರಾಧಿಕಾರ ಅಥವಾ ನಿಕಾಯದ ಅಥವಾ ಕಂಪನಿಗಳ ಅಧಿನಿಯಮ, 1956 (1956ರ 1)ರ 617ನೇ ಪ್ರಕರಣದಲ್ಲಿ ಪರಿಭಾಷಿಸಿರುವಂತೆ, ರಾಜ್ಯ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಸರ್ಕಾರಿ ಕಂಪನಿಯ ಸೇವೆಯಲ್ಲಿರುವ ಅಥವಾ ಅದರಿಂದ ಸಂಬಳ ಪಡೆಯುತ್ತಿರುವ ಯಾರೇ ವ್ಯಕ್ತಿಗೆ ಸಂಬಂಧಿಸಿದಂತೆ; ಅಥವಾ

(ಬಿ) ರಾಜ್ಯದಲ್ಲಿನ ಪೌರಸಭೆ ಅಥವಾ ಪಂಚಾಯತ್‌ಗಳು ಅಥವಾ ಇತರ ಸ್ಥಳೀಯ ನಿಕಾಯಕ್ಕೆ ಸಂಬಂಧಿಸಿದಂತೆ ಮತದಾರರ ಪಟ್ಟಿಯನ್ನು ಸಿದ್ಧಪಡಿಸಲು, ಪ್ರಕಟಿಸಲು, ನಿರ್ವಹಿಸಲು ಅಥವಾ ಪರಿಷ್ಕೃತಗೊಳಿಸಲು ಅಥವಾ ಚುನಾವಣೆಯನ್ನು ನಡೆಸಲು ಅಥವಾ ಆ ಚುನಾವಣೆಯ ಭಾಗವಾಗಿ ಕಾರ್ಯನಿರ್ವಹಿಸಲು ಯಾರೇ ವ್ಯಕ್ತಿಯನ್ನು ಅವನ ಪದದ ಕಾರಣದಿಂದಾಗಿ ಅಧಿಕೃತಗೊಳಿಸಿದೆಯೋ ಆ ಪದವನ್ನು ಧಾರಣ ಮಾಡಿರುವ ವ್ಯಕ್ತಿಗೆ ಸಂಬಂಧಿಸಿದಂತೆ; ಅಥವಾ

(ಸಿ) ರಾಜ್ಯ ಸರ್ಕಾರದ ವ್ಯವಹಾರಗಳಿಗೆ ಸಂಬಂಧಿಸಿದಂತೆ ಯಾವುದೇ ಸರ್ಕಾರಿ ಕರ್ತವ್ಯವನ್ನು ನಿರ್ವಹಿಸಲು ಯಾರೇ ವ್ಯಕ್ತಿಯನ್ನು ಅವನ ಪದದ ಕಾರಣದಿಂದಾಗಿ ಅಧಿಕೃತಗೊಳಿಸಲಾಗಿದೆಯೋ ಅಥವಾ ಅಗತ್ಯಪಡಿಸಲಾಗಿದೆಯೋ ಆ ಪದವನ್ನು ಧಾರಣ ಮಾಡಿರುವ ವ್ಯಕ್ತಿಗೆ (ರಾಜ್ಯದ ಸಚಿವರು ಮತ್ತು ವಿಧಾನ ಪರಿಷತ್ತು ಅಥವಾ ವಿಧಾನಸಭೆಯ ಸದಸ್ಯರನ್ನು ಹೊರತುಪಡಿಸಿ) ಸಂಬಂಧಿಸಿದಂತೆ; ಅಥವಾ

(ಡಿ) ರಾಜ್ಯ ಸರ್ಕಾರದಿಂದ ಅಥವಾ ಪ್ರಾಂತೀಯ ಅಥವಾ ರಾಜ್ಯ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ಯಾವುದೇ ನಿಗಮದಿಂದ ಅಥವಾ ಕಂಪನಿಗಳ ಅಧಿನಿಯಮ, 1956 (1956ರ 1)ರ 617ನೇ ಪ್ರಕರಣದಲ್ಲಿ ಪರಿಭಾಷಿಸಿದಂತೆ ರಾಜ್ಯ ಸರ್ಕಾರದ ಒಡೆತನ ಅಥವಾ ನಿಯಂತ್ರಣ ಹೊಂದಿರುವ ಅಥವಾ ಅನುದಾನ ಪಡೆದ ಯಾವುದೇ ಪ್ರಾಧಿಕಾರ ಅಥವಾ ನಿಕಾಯ ಅಥವಾ ಸರ್ಕಾರಿ ಕಂಪನಿಯಿಂದ ಯಾವುದೇ ಆರ್ಥಿಕ ನೆರವು ಪಡೆಯುತ್ತಿರುವ ಅಥವಾ ಪಡೆದುಕೊಂಡಿರುವ ಕೃಷಿ, ಕೈಗಾರಿಕೆ, ವ್ಯಾಪಾರ ಅಥವಾ ಬ್ಯಾಂಕ್ ವ್ಯವಹಾರದಲ್ಲಿ ತೊಡಗಿರುವ ನೋಂದಾಯಿತ ಸಹಕಾರಿ–ಸಂಘದ ಅಧ್ಯಕ್ಷ, ಕಾರ್ಯದರ್ಶಿ ಅಥವಾ ಇತರ ಪದಾಧಿಕಾರಿಯಾಗಿರುವ ಯಾರೇ ವ್ಯಕ್ತಿಗೆ ಸಂಬಂಧಿಸಿದಂತೆ; ಅಥವಾ

(ಇ) ಯಾವುದೇ ಹೆಸರಿನಿಂದ ಕರೆಯಲಾಗುವ, ಯಾವುದೇ ರಾಜ್ಯ ಸೇವಾ ಆಯೋಗ ಅಥವಾ ಮಂಡಳಿಯ ಅಧ್ಯಕ್ಷ, ಸದಸ್ಯ ಅಥವಾ ನೌಕರನಾಗಿರುವ ಅಥವಾ ಅಂಥ ಆಯೋಗ ಅಥವಾ ಮಂಡಳಿಯ

ಪರವಾಗಿ ಯಾವುದೇ ಪರೀಕ್ಷೆಯನ್ನು ನಡೆಸುವುದಕ್ಕಾಗಿ ಅಥವಾ ಯಾವುದೇ ಆಯ್ಕೆ ಮಾಡುವುದಕ್ಕಾಗಿ ಅಂಥ ಆಯೋಗ ಅಥವಾ ಮಂಡಳಿಯು ನೇಮಕ ಮಾಡಿದ ಯಾವುದೇ ಆಯ್ಕೆ ಸಮಿತಿಯ ಸದಸ್ಯನಾಗಿರುವ ಯಾರೇ ವ್ಯಕ್ತಿಗೆ ಸಂಬಂಧಿಸಿದಂತೆ; ಅಥವಾ

(ಎಫ್) ಪ್ರಾಂತೀಯ ಅಥವಾ ರಾಜ್ಯ ಅಧಿನಿಯಮದ ಮೂಲಕ ಸ್ಥಾಪಿತವಾದ ಅಥವಾ ರಾಜ್ಯ ಸರ್ಕಾರವು ಸ್ಥಾಪಿಸುವ ಅಥವಾ ನಿಯಂತ್ರಿಸುವ ಅಥವಾ ಧನಸಹಾಯ ನೀಡುವ ಯಾವುದೇ ವಿಶ್ವವಿದ್ಯಾಲಯದ ಕುಲಪತಿ ಅಥವಾ ಯಾವುದಾದರೂ ಹೆಸರಿನಿಂದ ಕರೆಯಲಾಗುವ ಯಾವುದೇ ಆಡಳಿತ ನಿಕಾಯದ ಸದಸ್ಯ, ಪ್ರಾಧ್ಯಾಪಕ, ಸಹ–ಪ್ರಾಧ್ಯಾಪಕ, ಸಹಾಯಕ ಪ್ರಾಧ್ಯಾಪಕ, ರೀಡರ್, ಉಪನ್ಯಾಸಕ ಅಥವಾ ಇತರ ಯಾರೇ ಶಿಕ್ಷಕ ಅಥವಾ ನೌಕರನಾಗಿರುವ ಯಾರೇ ವ್ಯಕ್ತಿಗೆ ಮತ್ತು ಪರೀಕ್ಷೆಗಳನ್ನು ಆಯೋಜಿಸುವುದಕ್ಕೆ ಮತ್ತು ನಡೆಸುವುದಕ್ಕೆ ಸಂಬಂಧಿಸಿದಂತೆ, ಅಂಥ ವಿಶ್ವವಿದ್ಯಾಲಯವು ಅಥವಾ ಅಂಥ ಇತರ ಯಾವುದೇ ಸಾರ್ವಜನಿಕ ಪ್ರಾಧಿಕಾರವು ಯಾವ ವ್ಯಕ್ತಿಯ ಸೇವೆಗಳನ್ನು ಪಡೆದುಕೊಂಡಿರುವುದೋ ಆ ಯಾರೇ ವ್ಯಕ್ತಿಗೆ ಸಂಬಂಧಿಸಿದಂತೆ; ಅಥವಾ

(ಜಿ) ರಾಜ್ಯ ಸರ್ಕಾರ ಅಥವಾ ಯಾವುದೇ ಸ್ಥಳೀಯ ಅಥವಾ ಇತರ ಸಾರ್ವಜನಿಕ ಪ್ರಾಧಿಕಾರದಿಂದ ಯಾವುದೇ ಆರ್ಥಿಕ ನೆರವನ್ನು ಪಡೆಯುವ ಅಥವಾ ಪಡೆದುಕೊಂಡಿರುವ ಯಾವುದೇ ರೀತಿಯಲ್ಲಿ ಸ್ಥಾಪಿಸಿರುವ ಶೈಕ್ಷಣಿಕ, ವೈಜ್ಞಾನಿಕ, ಸಾಮಾಜಿಕ, ಸಾಂಸ್ಕೃತಿಕ ಅಥವಾ ಇತರ ಸಂಸ್ಥೆಯ ಪದಾಧಿಕಾರಿಯಾಗಿರುವ ಅಥವಾ ನೌಕರನಾಗಿರುವ ಯಾರೇ ವ್ಯಕ್ತಿಗೆ ಸಂಬಂಧಿಸಿದಂತೆ

– ರಾಜ್ಯ ಜಾಗೃತಿ ಆಯೋಗ ಯಾವುದಾದರೂ ಇದ್ದರೆ, ಅದು ಅಥವಾ ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಮೇರೆಗೆ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ರಾಜ್ಯ ಸರ್ಕಾರದ ಯಾರೇ ಅಧಿಕಾರಿ ಅಥವಾ ಇತರ ಯಾವುದೇ ಪ್ರಾಧಿಕಾರ;

(viii) ಸಂವಿಧಾನದ 33ನೇ ಅನುಚ್ಛೇದದ (ಎ) ಖಂಡ ಅಥವಾ (ಬಿ) ಖಂಡ ಅಥವಾ (ಸಿ) ಖಂಡ ಅಥವಾ (ಡಿ) ಖಂಡದಲ್ಲಿ ಉಲ್ಲೇಖಿಸಿದ ಸದಸ್ಯರು ಅಥವಾ ವ್ಯಕ್ತಿಗಳ ಸಂಬಂಧದಲ್ಲಿ, ಸಂದರ್ಭಾನುಸಾರ ಆ ಸಂಬಂಧದಲ್ಲಿ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮೇರೆಗೆ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಪ್ರಾಧಿಕಾರ ಅಥವಾ ಪ್ರಾಧಿಕಾರಗಳು;

(ಸಿ) "ದೂರುದಾರ" ಎಂದರೆ, ಈ ಅಧಿನಿಯಮದ ಮೇರೆಗೆ ಬಹಿರಂಗಪಡಿಸುವಿಕೆಗೆ ಸಂಬಂಧಿಸಿದಂತೆ ದೂರನ್ನು ಸಲ್ಲಿಸುವ ಯಾರೇ ವ್ಯಕ್ತಿ;

(ಡಿ) "ಬಹಿರಂಗಪಡಿಸುವಿಕೆ" ಎಂದರೆ:–

(i) ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1988 (1988ರ 49)ರ ಮೇರೆಗೆ ಅಪರಾಧ ಮಾಡಲು ಪ್ರಯತ್ನಿಸಿರುವುದಕ್ಕೆ ಅಥವಾ ಅಪರಾಧ ಮಾಡಿರುವುದಕ್ಕೆ;

(ii) ಉದ್ದೇಶಪೂರ್ವಕ ಅಧಿಕಾರದ ದುರ್ಬಳಕೆ ಅಥವಾ ಉದ್ದೇಶಪೂರ್ವಕ ವಿವೇಚನಾಧಿಕಾರದ ದುರ್ಬಳಕೆಯ ಕಾರಣದಿಂದಾಗಿ ಸರ್ಕಾರಕ್ಕೆ ನಿರೂಪಿಸಬಹುದಾದ ನಷ್ಟವನ್ನು ಉಂಟುಮಾಡಿರುವುದಕ್ಕೆ ಅಥವಾ ಲೋಕ ನೌಕರನಿಗೆ ಅಥವಾ ಯಾರೇ ಮೂರನೇ ಪಕ್ಷಕಾರನಿಗೆ ನಿರೂಪಿಸಬಹುದಾದ ಅಕ್ರಮ ಲಾಭವನ್ನು ಉಂಟುಮಾಡಿರುವುದಕ್ಕೆ;

(iii) ಲೋಕ ನೌಕರನು ಕ್ರಿಮಿನಲ್ ಅಪರಾಧವನ್ನು ಮಾಡಲು ಪ್ರಯತ್ನಿಸಿರುವುದಕ್ಕೆ ಅಥವಾ ಅಪರಾಧ ಮಾಡಿರುವುದಕ್ಕೆ

– ಸಂಬಂಧಪಟ್ಟಂತೆ, ಲೋಕನೌಕರನ ವಿರುದ್ಧ ಲಿಖಿತದಲ್ಲಿ ಅಥವಾ ಇ–ಮೇಲ್ ಅಥವಾ ಇ–ಮೇಲ್ ಸಂದೇಶದ ಮೂಲಕ ನೀಡಿದ ದೂರು ಮತ್ತು ಇದರಲ್ಲಿ 4ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಸಾರ್ವಜನಿಕ ಹಿತಾಸಕ್ತಿ ಬಹಿರಂಗಪಡಿಸುವಿಕೆಯನ್ನು ಒಳಗೊಳ್ಳುತ್ತದೆ;

(ಇ) "ಇ–ಮೇಲ್" ಅಥವಾ "ಇ–ಮೇಲ್ ಸಂದೇಶ" ಎಂದರೆ, ಸಂದೇಶದೊಂದಿಗೆ ಕಳುಹಿಸಬಹುದಾಗಿರುವ ಪಠ್ಯ, ಚಿತ್ರ, ಶ್ರವ್ಯ, ದೃಶ್ಯ ಮತ್ತು ಇತರ ಯಾವುದೇ ವಿದ್ಯುನ್ಮಾನ ದಾಖಲೆಯಲ್ಲಿನ ಲಗತ್ತುಗಳನ್ನು ಒಳಗೊಂಡಂತೆ, ಯಾವುದೇ ಗಣಕಯಂತ್ರ, ಗಣಕಯಂತ್ರ ವ್ಯವಸ್ಥೆ, ಗಣಕಯಂತ್ರ ಸಂಪನ್ಮೂಲ ಅಥವಾ ಸಂವಹನ ಸಾಧನದಲ್ಲಿ ಸೃಜಿಸಿದ ಅಥವಾ ಕಳುಹಿಸಿದ ಅಥವಾ ಸ್ವೀಕರಿಸಿದ ಸಂದೇಶ ಅಥವಾ ಮಾಹಿತಿ;

(ಎಫ್) "ಸರ್ಕಾರಿ ಕಂಪನಿ" ಎಂದರೆ, ಕಂಪನಿಗಳ ಅಧಿನಿಯಮ, 1956 (1956ರ 1)ರ 617ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಕಂಪನಿ;

(ಜಿ) "ಅಧಿಸೂಚನೆ" ಎಂದರೆ, ಭಾರತ ರಾಜಪತ್ರದಲ್ಲಿ ಅಥವಾ ಸಂದರ್ಭಾನುಸಾರ, ರಾಜ್ಯದ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆ;

(ಎಚ್) "ಸಾರ್ವಜನಿಕ ಪ್ರಾಧಿಕಾರ" ಎಂದರೆ, ಸಕ್ಷಮ ಪ್ರಾಧಿಕಾರದ ಅಧಿಕಾರವ್ಯಾಪ್ತಿಯೊಳಗೆ ಬರುವ ಯಾವುದೇ ಪ್ರಾಧಿಕಾರ ಅಥವಾ ನಿಕಾಯ ಅಥವಾ ಸಂಸ್ಥೆ;

(ಐ) "ಲೋಕ ನೌಕರ" ಎಂಬುದು, ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1988 (1988ರ 49)ರ 2ನೇ ಪ್ರಕರಣದ (ಸಿ) ಖಂಡದಲ್ಲಿ ಅದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು. ಆದರೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಅಥವಾ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಒಳಗೊಳ್ಳತಕ್ಕದ್ದಲ್ಲ;

(ಜೆ) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ, ಸಂದರ್ಭಾನುಸಾರ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರವು ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಕೆ) "ವಿನಿಯಮಗಳು" ಎಂದರೆ, ಈ ಅಧಿನಿಯಮದ ಮೇರೆಗೆ ಸಕ್ಷಮ ಪ್ರಾಧಿಕಾರವು ರಚಿಸಿದ ವಿನಿಯಮಗಳು.

## ಅಧ್ಯಾಯ II

### ಸಾರ್ವಜನಿಕ ಹಿತಾಸಕ್ತಿ ಬಹಿರಂಗಪಡಿಸುವಿಕೆ

**4. ಸಾರ್ವಜನಿಕ ಹಿತಾಸಕ್ತಿ ಬಹಿರಂಗಪಡಿಸುವಿಕೆಯ ಅಗತ್ಯತೆ.–** (1) ಸರ್ಕಾರಿ ರಹಸ್ಯಗಳ ಅಧಿನಿಯಮ, 1923 (1923ರ 19)ರ ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದರೂ, ಯಾವುದೇ ಸರ್ಕಾರೇತರ ಸಂಘ–ಸಂಸ್ಥೆಯನ್ನು ಒಳಗೊಂಡಂತೆ, ಯಾರೇ ಲೋಕ ನೌಕರ ಅಥವಾ ಇತರ ಯಾರೇ ವ್ಯಕ್ತಿಯು ಸಕ್ಷಮ ಪ್ರಾಧಿಕಾರದ ಮುಂದೆ ಸಾರ್ವಜನಿಕ ಹಿತಾಸಕ್ತಿಯನ್ನು ಬಹಿರಂಗಪಡಿಸಬಹುದು.

(2) ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಬಹಿರಂಗಪಡಿಸುವಿಕೆಯನ್ನು, ಈ ಅಧಿನಿಯಮದ ಉದ್ದೇಶಗಳಿಗಾಗಿ ಸಾರ್ವಜನಿಕ ಹಿತಾಸಕ್ತಿ ಬಹಿರಂಗಪಡಿಸುವಿಕೆ ಎಂಬುದಾಗಿ ಪರಿಗಣಿಸತಕ್ಕದ್ದು ಮತ್ತು ಆ ಸಾರ್ವಜನಿಕ ಹಿತಾಸಕ್ತಿ ಬಹಿರಂಗಪಡಿಸುವಿಕೆಯನ್ನು ಸಕ್ಷಮ ಪ್ರಾಧಿಕಾರದ ಮುಂದೆ ಮಾಡತಕ್ಕದ್ದು ಮತ್ತು ಬಹಿರಂಗಪಡಿಸುವಿಕೆಯ ಬಗ್ಗೆ ಸಲ್ಲಿಸಿರುವ ದೂರನ್ನು, ಸಕ್ಷಮ ಪ್ರಾಧಿಕಾರದ ಪರವಾಗಿ, ಸಕ್ಷಮ ಪ್ರಾಧಿಕಾರವು ಮಾಡಿದ ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರವು ಸ್ವೀಕರಿಸತಕ್ಕದ್ದು.

(3) ಪ್ರತಿಯೊಂದು ಬಹಿರಂಗಪಡಿಸುವಿಕೆಯನ್ನು ಸದ್ಭಾವನೆಯಿಂದ ಮಾಡತಕ್ಕದ್ದು ಮತ್ತು ಬಹಿರಂಗಪಡಿಸಿರುವ ವ್ಯಕ್ತಿಯು, ಆತನು ಬಹಿರಂಗಪಡಿಸಿದ ಮಾಹಿತಿ ಮತ್ತು ಅದರಲ್ಲಿ ಒಳಗೊಂಡ ಆಪಾದನೆಯು ಬಹುಮಟ್ಟಿಗೆ ನೈಜವಾಗಿದೆಯೆಂಬುದನ್ನು ಅವನು ಯುಕ್ತವಾಗಿ ನಂಬಿದ್ದಾನೆಂದು ನಿರೂಪಿಸಿ ಖುದ್ದಾಗಿ ಘೋಷಣೆ ಮಾಡತಕ್ಕದ್ದು.

(4) ಪ್ರತಿಯೊಂದು ಬಹಿರಂಗಪಡಿಸುವಿಕೆಯನ್ನು ನಿಯಮಿಸಬಹುದಾದಂಥ ಕಾರ್ಯವಿಧಾನಕ್ಕೆ ಅನುಸಾರವಾಗಿ ಲಿಖಿತದಲ್ಲಿ ಅಥವಾ ಇ–ಮೇಲ್ ಅಥವಾ ಇ–ಮೇಲ್ ಸಂದೇಶದ ಮೂಲಕ ಮಾಡತಕ್ಕದ್ದು ಮತ್ತು ಆ ಬಹಿರಂಗಪಡಿಸುವಿಕೆಯು ಪೂರ್ಣ ವಿವರಗಳನ್ನು ಒಳಗೊಂಡಿರತಕ್ಕದ್ದು ಮತ್ತು ಪೂರಕ ದಾಖಲೆಗಳು ಅಥವಾ ಇತರ ಭೌತಿಕ ಸಾಮಗ್ರಿಗಳು ಯಾವುದಾದರೂ ಇದ್ದರೆ ಅದನ್ನು ಲಗತ್ತಿಸತಕ್ಕದ್ದು.

(5) ಸಕ್ಷಮ ಪ್ರಾಧಿಕಾರವು, ತಾನು ಸೂಕ್ತವೆಂದು ಭಾವಿಸಿದರೆ, ಬಹಿರಂಗಪಡಿಸಿರುವ ವ್ಯಕ್ತಿಗಳಿಂದ ಹೆಚ್ಚಿನ ಮಾಹಿತಿ ಅಥವಾ ವಿವರಗಳನ್ನು ತರಿಸಿಕೊಳ್ಳಬಹುದು.

(6) ಬಹಿರಂಗಪಡಿಸುವಿಕೆಯು, ದೂರುದಾರನ ಅಥವಾ ಸಾರ್ವಜನಿಕ ಹಿತಾಸಕ್ತಿಯನ್ನು ಬಹಿರಂಗಪಡಿಸಿರುವ ಲೋಕ ನೌಕರನ ಗುರುತನ್ನು ಸೂಚಿಸದಿದ್ದರೆ ಅಥವಾ ದೂರುದಾರನ ಅಥವಾ ಲೋಕ ನೌಕರನ ಗುರುತು ಸರಿಯಿಲ್ಲದಿರುವುದು ಅಥವಾ ಸುಳ್ಳಾಗಿರುವುದು ಕಂಡುಬಂದರೆ, ಸಕ್ಷಮ ಪ್ರಾಧಿಕಾರವು ಸಾರ್ವಜನಿಕ ಹಿತಾಸಕ್ತಿ ಬಹಿರಂಗಪಡಿಸಿರುವುದರ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಳ್ಳತಕ್ಕದ್ದಲ್ಲ.

## ಅಧ್ಯಾಯ III

### ಸಾರ್ವಜನಿಕ ಹಿತಾಸಕ್ತಿ ಬಹಿರಂಗಪಡಿಸುವಿಕೆಯ ಸಂಬಂಧದಲ್ಲಿ ವಿಚಾರಣೆ

**5. ಸಾರ್ವಜನಿಕ ಹಿತಾಸಕ್ತಿ ಬಹಿರಂಗಪಡಿಸುವಿಕೆಯನ್ನು ಸ್ವೀಕರಿಸಿದ ಮೇಲೆ ಸಕ್ಷಮ ಪ್ರಾಧಿಕಾರದ ಅಧಿಕಾರಗಳು ಮತ್ತು ಪ್ರಕಾರ್ಯಗಳು.–** (1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಸಕ್ಷಮ ಪ್ರಾಧಿಕಾರವು, 4ನೇ ಪ್ರಕರಣದ ಮೇರೆಗೆ ಸಾರ್ವಜನಿಕ ಹಿತಾಸಕ್ತಿ ಬಹಿರಂಗಪಡಿಸಿರುವುದನ್ನು ಸ್ವೀಕರಿಸಿದ ಮೇಲೆ,–

(ಎ) ಬಹಿರಂಗಪಡಿಸಿರುವವನು ಆ ವ್ಯಕ್ತಿಯೇ ಅಥವಾ ಲೋಕ ನೌಕರನೇ ಅಥವಾ ಅಲ್ಲವೇ ಎಂಬುದನ್ನು ಆ ದೂರುದಾರ ಅಥವಾ ಲೋಕ ನೌಕರನಿಂದ ಖಚಿತಪಡಿಸಿಕೊಳ್ಳತಕ್ಕದ್ದು;

(ಬಿ) ಸಾರ್ವಜನಿಕ ಹಿತಾಸಕ್ತಿಯನ್ನು ಬಹಿರಂಗಪಡಿಸುವಾಗ ಅಥವಾ ಆತನ ದೂರಿನಲ್ಲಿ ಅಥವಾ ಅನ್ಯಥಾ ಸ್ವತಃ ದೂರುದಾರನೇ ಇತರ ಯಾವುದೇ ಕಚೇರಿ ಅಥವಾ ಪ್ರಾಧಿಕಾರಕ್ಕೆ ತನ್ನ ಗುರುತನ್ನು ಪ್ರಕಟಪಡಿಸಿದ ಹೊರತು ದೂರುದಾರನ ಗುರುತನ್ನು ರಹಸ್ಯವಾಗಿಡತಕ್ಕದ್ದು.

(2) ಸಕ್ಷಮ ಪ್ರಾಧಿಕಾರವು, ದೂರನ್ನು ಸ್ವೀಕರಿಸಿದ ಮೇಲೆ ಮತ್ತು ದೂರುದಾರನ ಅಥವಾ ಲೋಕ ನೌಕರನ ಗುರುತನ್ನು ಮರೆಮಾಚಿದ ಮೇಲೆ, ಮೊದಲಿಗೆ, ಬಹಿರಂಗಪಡಿಸಿರುವುದರ ಬಗ್ಗೆ ಹೆಚ್ಚಿನ ತನಿಖೆ ಮಾಡಲು ಯಾವುದೇ ಆಧಾರವಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ನಿಯಮಿಸಬಹುದಾದಂಥ ಕಾಲದೊಳಗೆ ವಿವೇಚನಾಯುಕ್ತ ವಿಚಾರಣೆ ಮಾಡತಕ್ಕದ್ದು.

(3) ಸಕ್ಷಮ ಪ್ರಾಧಿಕಾರವು, ವಿವೇಚನಾಯುಕ್ತ ವಿಚಾರಣೆಯ ಪರಿಣಾಮವಾಗಿಯಾಗಲೀ ಅಥವಾ ಯಾವುದೇ ವಿಚಾರಣೆಯಿಲ್ಲದೆ ಸ್ವತಃ ಬಹಿರಂಗಪಡಿಸಿದ ಆಧಾರದ ಮೇಲಾಗಲೀ, ಬಹಿರಂಗಪಡಿಸುವಿಕೆಯು ತನಿಖೆಯನ್ನು ಅಗತ್ಯಪಡಿಸುತ್ತದೆ ಎಂದು ಅಭಿಪ್ರಾಯಪಟ್ಟರೆ, ಅದು ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಸಂಸ್ಥೆ ಅಥವಾ ಪ್ರಾಧಿಕಾರ, ಸಂಬಂಧಪಟ್ಟ ಮಂಡಳಿ ಅಥವಾ ನಿಗಮ ಅಥವಾ ಸಂಬಂಧಪಟ್ಟ ಕಚೇರಿಯ ಇಲಾಖೆಯ ಮುಖ್ಯಸ್ಥರಿಂದ ಅಭಿಪ್ರಾಯಗಳನ್ನು ಅಥವಾ ವಿವರಣೆಯನ್ನು ಅಥವಾ ವರದಿಯನ್ನು ಕೋರತಕ್ಕದ್ದು.

(4) ಉಪಪ್ರಕರಣ (3)ರಲ್ಲಿ ಉಲ್ಲೇಖಿಸಲಾದ ಅಭಿಪ್ರಾಯಗಳನ್ನು ಅಥವಾ ವಿವರಣೆಗಳನ್ನು ಅಥವಾ ವರದಿಯನ್ನು ಕೋರುವಾಗ, ಸಕ್ಷಮ ಪ್ರಾಧಿಕಾರವು, ದೂರುದಾರ ಅಥವಾ ಲೋಕ ನೌಕರನ ಗುರುತನ್ನು ಪ್ರಕಟಗೊಳಿಸತಕ್ಕದ್ದಲ್ಲ ಮತ್ತು ದೂರುದಾರನ ಅಥವಾ ಲೋಕ ನೌಕರನ ಗುರುತನ್ನು ಪ್ರಕಟಿಸದಂತೆ ಸಂಬಂಧಪಟ್ಟ ಸಂಸ್ಥೆ ಅಥವಾ ಸಂಬಂಧಪಟ್ಟ ಕಚೇರಿಯ ಇಲಾಖಾ ಮುಖ್ಯಸ್ಥನಿಗೆ ನಿರ್ದೇಶಿಸತಕ್ಕದ್ದು:

ಪರಂತು, ಸಕ್ಷಮ ಪ್ರಾಧಿಕಾರವು, (3)ನೇ ಉಪಪ್ರಕರಣದ ಮೇರೆಗೆ ಸಾರ್ವಜನಿಕ ಬಹಿರಂಗಪಡಿಸುವಿಕೆಯ ಕುರಿತು ಸಂಸ್ಥೆ ಅಥವಾ ಪ್ರಾಧಿಕಾರ, ಸಂಬಂಧಪಟ್ಟ ಮಂಡಳಿ ಅಥವಾ ನಿಗಮ ಅಥವಾ ಸಂಬಂಧಪಟ್ಟ ಕಚೇರಿಯ ಇಲಾಖಾ ಮುಖ್ಯಸ್ಥರಿಂದ ಅಭಿಪ್ರಾಯಗಳನ್ನು ಅಥವಾ ವಿವರಣೆಯನ್ನು ಅಥವಾ ವರದಿಯನ್ನು ಕೋರುವ ಉದ್ದೇಶಕ್ಕಾಗಿ, ದೂರುದಾರ ಅಥವಾ ಲೋಕ ನೌಕರನ ಗುರುತನ್ನು ಅವರಿಗೆ ಪ್ರಕಟಪಡಿಸುವ ಅವಶ್ಯವಿದೆ ಎಂದು ಅಭಿಪ್ರಾಯಪಟ್ಟರೆ, ಸಕ್ಷಮ ಪ್ರಾಧಿಕಾರವು, ದೂರುದಾರನ ಅಥವಾ ಲೋಕ ನೌಕರನ ಪೂರ್ವ ಲಿಖಿತ ಸಮ್ಮತಿ ಪಡೆದು, ಸದರಿ ಉದ್ದೇಶಕ್ಕಾಗಿ ಸಂಸ್ಥೆ ಅಥವಾ ಪ್ರಾಧಿಕಾರ, ಸಂಬಂಧಪಟ್ಟ ಮಂಡಳಿ ಅಥವಾ ನಿಗಮ ಅಥವಾ ಸಂಬಂಧಪಟ್ಟ ಕಚೇರಿಯ ಇಲಾಖಾ ಮುಖ್ಯಸ್ಥನಿಗೆ ದೂರುದಾರನ ಅಥವಾ ಲೋಕ ನೌಕರನ ಗುರುತನ್ನು ಪ್ರಕಟಪಡಿಸಬಹುದು:

ಮತ್ತು ಪರಂತು, ದೂರುದಾರ ಅಥವಾ ಲೋಕ ನೌಕರನು, ಇಲಾಖಾ ಮುಖ್ಯಸ್ಥನಿಗೆ ತನ್ನ ಹೆಸರನ್ನು ಬಹಿರಂಗಪಡಿಸಲು ಒಪ್ಪದೆ ಇದ್ದ ಸಂದರ್ಭದಲ್ಲಿ, ಸಂದರ್ಭಾನುಸಾರ ದೂರುದಾರ ಅಥವಾ ಲೋಕ ನೌಕರನು, ಸಕ್ಷಮ ಪ್ರಾಧಿಕಾರಕ್ಕೆ ತನ್ನ ದೂರಿಗೆ ಪೂರಕವಾದ ಎಲ್ಲಾ ದಸ್ತಾವೇಜೀಯ ಸಾಕ್ಷ್ಯವನ್ನು ಒದಗಿಸತಕ್ಕದ್ದು.

(5) ಸಂಬಂಧಪಟ್ಟ ಸಂಸ್ಥೆ ಅಥವಾ ಕಚೇರಿಯ ಮುಖ್ಯಸ್ಥನು, ಬಹಿರಂಗಪಡಿಸಿರುವ ದೂರುದಾರ ಅಥವಾ ಲೋಕ ನೌಕರನ ಗುರುತನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರಕಟಪಡಿಸತಕ್ಕದ್ದಲ್ಲ.

(6) ಸಕ್ಷಮ ಪ್ರಾಧಿಕಾರವು ವಿಚಾರಣೆಯನ್ನು ನಡೆಸಿದ ನಂತರ,–

(ಎ) ಬಹಿರಂಗಪಡಿಸುವಿಕೆಯಲ್ಲಿ ಒಳಗೊಂಡ ಸಂಗತಿಗಳು ಮತ್ತು ಆಪಾದನೆಗಳು ಕ್ಷುಲ್ಲಕ ಅಥವಾ ಕಿರುಕುಳಕಾರಿಯಾಗಿವೆಯೆಂದು; ಅಥವಾ

(ಬಿ) ವಿಚಾರಣೆಯನ್ನು ಮುಂದುವರಿಸಲು ಸಾಕಷ್ಟು ಕಾರಣಗಳಿಲ್ಲವೆಂದು

– ಅಭಿಪ್ರಾಯಪಟ್ಟರೆ, ಸಕ್ಷಮ ಪ್ರಾಧಿಕಾರವು ಆ ವಿಷಯವನ್ನು ಮುಕ್ತಾಯಗೊಳಿಸತಕ್ಕದ್ದು.

(7) ಉಪಪ್ರಕರಣ (3)ರಲ್ಲಿ ಉಲ್ಲೇಖಿಸಲಾದ ಅಭಿಪ್ರಾಯಗಳು ಅಥವಾ ವಿವರಣೆಗಳು ಅಥವಾ ವರದಿಯನ್ನು ಸ್ವೀಕರಿಸಿದ ನಂತರ, ಸಕ್ಷಮ ಪ್ರಾಧಿಕಾರವು, ಅಂಥ ಅಭಿಪ್ರಾಯಗಳು ಅಥವಾ ವಿವರಣೆಗಳು ಅಥವಾ ವರದಿಯು, ಅಧಿಕಾರದ ಉದ್ದೇಶಪೂರ್ವಕ ದುರುಪಯೋಗವನ್ನಾಗಲೀ ಅಥವಾ ವಿವೇಚನಾಯುಕ್ತವಾದ ಉದ್ದೇಶಪೂರ್ವಕ ದುರುಪಯೋಗವನ್ನಾಗಲೀ ಪ್ರಕಟಪಡಿಸುತ್ತದೆಯೆಂದು ಅಥವಾ ಭ್ರಷ್ಟಾಚಾರದ ಆರೋಪಗಳನ್ನು ರುಜುವಾತುಪಡಿಸುತ್ತದೆ ಎಂದು ಅಭಿಪ್ರಾಯಪಟ್ಟರೆ, ಅದು ಈ ಕೆಳಕಂಡ ಯಾವುದೇ ಒಂದು ಅಥವಾ ಒಂದಕ್ಕಿಂತ ಹೆಚ್ಚು ಕ್ರಮಗಳನ್ನು ತೆಗೆದುಕೊಳ್ಳುವಂತೆ ಸಾರ್ವಜನಿಕ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡತಕ್ಕದ್ದು, ಎಂದರೆ:–

(i) ಸಂಬಂಧಪಟ್ಟ ಲೋಕ ನೌಕರನ ವಿರುದ್ಧ ವ್ಯವಹರಣೆಗಳನ್ನು ಪ್ರಾರಂಭಿಸುವುದು;

(ii) ಭ್ರಷ್ಟ ಪದ್ಧತಿ ಅಥವಾ ಸಂದರ್ಭಾನುಸಾರ, ಪದದ ದುರುಪಯೋಗ ಅಥವಾ ವಿವೇಚನೆಯ ದುರುಪಯೋಗದ ಪರಿಣಾಮವಾಗಿ ಸರ್ಕಾರಕ್ಕೆ ಉಂಟಾದ ನಷ್ಟವನ್ನು ತುಂಬಿಕೊಡುವುದಕ್ಕಾಗಿ ಯುಕ್ತ ಆಡಳಿತಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುವುದು;

(iii) ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಸುಸಂಬದ್ಧ ಕಾನೂನುಗಳ ಮೇರೆಗೆ ಅಪರಾಧಿಕ ವ್ಯವಹರಣೆಗಳನ್ನು ಪ್ರಾರಂಭಿಸುವುದಕ್ಕಾಗಿ ಅಗತ್ಯಪಡಿಸಿದ್ದರೆ, ಹಾಗೆ ಮಾಡುವಂತೆ ಸಮುಚಿತ ಪ್ರಾಧಿಕಾರ ಅಥವಾ ಏಜೆನ್ಸಿಗೆ ಶಿಫಾರಸ್ಸು ಮಾಡುವುದು;

(iv) ಸುಧಾರಣಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕಾಗಿ ಶಿಫಾರಸ್ಸು ಮಾಡುವುದು;

(v) ಈ ಅಧಿನಿಯಮದ ಉದ್ದೇಶಕ್ಕಾಗಿ ಅವಶ್ಯವಾಗಬಹುದಾದ (i) ರಿಂದ (iv)ರವರೆಗಿನ ಖಂಡಗಳ ಅಡಿಯಲ್ಲಿ ಬಾರದಿರುವ ಇತರ ಯಾವುದೇ ಕ್ರಮಗಳನ್ನು ಕೈಗೊಳ್ಳುವುದು.

(8) ಉಪಪ್ರಕರಣ (7)ರ ಮೇರೆಗೆ ಯಾವ ಸಾರ್ವಜನಿಕ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆಯೋ ಆ ಸಾರ್ವಜನಿಕ ಪ್ರಾಧಿಕಾರವು, ಅಂಥ ಶಿಫಾರಸ್ಸನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಅಥವಾ ಸಾರ್ವಜನಿಕ ಪ್ರಾಧಿಕಾರವು ಮಾಡಿಕೊಂಡ ಕೋರಿಕೆ ಮೇರೆಗೆ ಸಕ್ಷಮ ಪ್ರಾಧಿಕಾರವು ಅನುಮತಿಸಬಹುದಾದಂಥ ಮೂರು ತಿಂಗಳನ್ನು ಮೀರದಿರುವಂಥ ವಿಸ್ತರಿಸಲಾದ ಅವಧಿಯೊಳಗೆ ಅಂಥ ಶಿಫಾರಸ್ಸಿನ ಮೇಲೆ ನಿರ್ಣಯ ಕೈಗೊಳ್ಳತಕ್ಕದ್ದು:

ಪರಂತು, ಸಾರ್ವಜನಿಕ ಪ್ರಾಧಿಕಾರವು ಸಕ್ಷಮ ಪ್ರಾಧಿಕಾರದ ಶಿಫಾರಸ್ಸನ್ನು ಒಪ್ಪದೆ ಇದ್ದ ಸಂದರ್ಭದಲ್ಲಿ, ಅದು ಅಂಥ ಅಸಮ್ಮತಿಗಾಗಿನ ಕಾರಣಗಳನ್ನು ದಾಖಲಿಸತಕ್ಕದ್ದು.

(9) ಸಕ್ಷಮ ಪ್ರಾಧಿಕಾರವು, ವಿಚಾರಣೆ ನಡೆಸಿದ ತರುವಾಯ, ದೂರಿನ ಮೇಲೆ ಕೈಗೊಂಡ ಕ್ರಮದ ಅಥವಾ ಅದರ ಅಂತಿಮ ಪರಿಣಾಮದ ಬಗ್ಗೆ ದೂರುದಾರನಿಗೆ ಅಥವಾ ಲೋಕ ನೌಕರನಿಗೆ ತಿಳಿಸತಕ್ಕದ್ದು:

ಪರಂತು, ವಿಚಾರಣೆ ನಡೆಸಿದ ತರುವಾಯ, ಸಕ್ಷಮ ಪ್ರಾಧಿಕಾರವು ಪ್ರಕರಣವನ್ನು ಮುಕ್ತಾಯಗೊಳಿಸಲು ನಿರ್ಧರಿಸಿರುವ ಸಂದರ್ಭದಲ್ಲಿ, ಅದು, ಪ್ರಕರಣವನ್ನು ಮುಕ್ತಾಯಗೊಳಿಸುವುದಾಗಿ ಆದೇಶ ಮಾಡುವ ಮುಂಚೆ, ದೂರುದಾರನು ಅಹವಾಲನ್ನು ಹೇಳಿಕೊಳ್ಳಲು ಇಚ್ಛಿಸಿದರೆ, ಅವನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡತಕ್ಕದ್ದು.

**6. ಸಕ್ಷಮ ಪ್ರಾಧಿಕಾರವು ವಿಚಾರಣೆ ಮಾಡದಿರುವ ವಿಷಯಗಳು.–** (1) ಬಹಿರಂಗಪಡಿಸಿರುವುದರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯವನ್ನು ಅಥವಾ ಎತ್ತಲಾದ ವಿವಾದಾಂಶವನ್ನು ನಿರ್ಧರಿಸಲು ಅಧಿಕೃತಗೊಂಡ ನ್ಯಾಯಾಲಯ ಅಥವಾ ನ್ಯಾಯಾಧಿಕರಣವು ಆ ವಿವಾದಾಂಶವನ್ನು ನಿರ್ಧರಿಸಿದ್ದರೆ, ಬಹಿರಂಗಪಡಿಸಿರುವುದರಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳು ಅಥವಾ ಎತ್ತಲಾದ ವಿವಾದಾಂಶವನ್ನು ಪರ್ಯಾಲೋಚಿಸಿದ ತರುವಾಯ ಸಕ್ಷಮ ಪ್ರಾಧಿಕಾರವು, ಅಂಥ ವಿವಾದಾಂಶವನ್ನು ಪುನರಾರಂಭಿಸಲು ಕೋರುತ್ತಿದೆ ಎಂಬುವಷ್ಟರ ಮಟ್ಟಿಗೆ ಬಹಿರಂಗಪಡಿಸಿರುವುದನ್ನು ಗಮನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(2) ಸಕ್ಷಮ ಪ್ರಾಧಿಕಾರವು,–

(ಎ) ಯಾವ ಬಹಿರಂಗಪಡಿಸುವಿಕೆಯ ಸಂಬಂಧದಲ್ಲಿ ಲೋಕ ನೌಕರರ (ವಿಚಾರಣೆಗಳು) ಅಧಿನಿಯಮ, 1850 (1850ರ 37)ರ ಮೇರೆಗೆ ವಿಧ್ಯುಕ್ತ ಮತ್ತು ಬಹಿರಂಗ ವಿಚಾರಣೆ ಮಾಡಲು ಆದೇಶಿಸಲಾಗಿದೆಯೋ ಆ ಯಾವುದೇ ಬಹಿರಂಗಪಡಿಸುವಿಕೆಯನ್ನು; ಅಥವಾ

(ಬಿ) ಯಾವ ಬಹಿರಂಗಪಡಿಸುವಿಕೆಯ ಸಂಬಂಧದಲ್ಲಿ ವಿಚಾರಣಾ ಆಯೋಗಗಳ ಅಧಿನಿಯಮ, 1952 (1952ರ 60)ರ ಮೇರೆಗೆ, ವಿಚಾರಣೆ ಮಾಡಲು ಉಲ್ಲೇಖಿಸಲಾಗಿದೆಯೋ ಆ ಯಾವುದೇ ಬಹಿರಂಗಪಡಿಸುವಿಕೆಯನ್ನು

– ಪುರಸ್ಕರಿಸತಕ್ಕದ್ದಲ್ಲ ಅಥವಾ ಆ ಬಗ್ಗೆ ವಿಚಾರಣೆ ಮಾಡತಕ್ಕದ್ದಲ್ಲ.

(3) ಸಕ್ಷಮ ಪ್ರಾಧಿಕಾರವು, ದೂರಿನ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದು ಆಪಾದಿಸಲಾಗಿರುವ ದಿನಾಂಕದಿಂದ ಏಳು ವರ್ಷಗಳು ಮುಕ್ತಾಯದ ನಂತರ ದೂರನ್ನು ನೀಡಿದ್ದರೆ, ಆಪಾದನೆಯನ್ನು ಒಳಗೊಂಡಿರುವ ಯಾವುದೇ ಬಹಿರಂಗಪಡಿಸುವಿಕೆಯನ್ನು ತನಿಖೆ ಮಾಡತಕ್ಕದ್ದಲ್ಲ.

(4) ಈ ಅಧಿನಿಯಮದಲ್ಲಿರುವುದಾವುದೂ, ಈ ಅಧಿನಿಯಮದ ಮೇರೆಗಿನ ಯಾವುದೇ ವಿಚಾರಣೆಯಲ್ಲಿ ನೌಕರನು ಕರ್ತವ್ಯ ನಿರ್ವಹಿಸುವಾಗ ಚಲಾಯಿಸಿದ ಯಾವುದೇ ಸದ್ಭಾವನಾ ಕ್ರಮ ಅಥವಾ ಸದ್ಭಾವನಾ ವಿವೇಚನೆಯನ್ನು (ಆಡಳಿತಾತ್ಮಕ ಮತ್ತು ಶಾಸನಬದ್ಧ ವಿವೇಚನೆ ಒಳಗೊಂಡಂತೆ) ಪ್ರಶ್ನಿಸಲು ಸಕ್ಷಮ ಪ್ರಾಧಿಕಾರಕ್ಕೆ ಅಧಿಕಾರ ನೀಡುತ್ತದೆ ಎಂಬುದಾಗಿ ಅರ್ಥೈಸತಕ್ಕದ್ದಲ್ಲ.

## ಅಧ್ಯಾಯ IV

## ಸಕ್ಷಮ ಪ್ರಾಧಿಕಾರದ ಅಧಿಕಾರಗಳು

**7. ಸಕ್ಷಮ ಪ್ರಾಧಿಕಾರದ ಅಧಿಕಾರಗಳು.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ಸಕ್ಷಮ ಪ್ರಾಧಿಕಾರಕ್ಕೆ ಪ್ರದತ್ತವಾದ ಅಧಿಕಾರಗಳಿಗೆ ಬಾಧಕವಾಗದಂತೆ, ಸಕ್ಷಮ ಪ್ರಾಧಿಕಾರವು, ಯಾವುದೇ ವಿಚಾರಣೆ ಮಾಡುವ ಉದ್ದೇಶಕ್ಕಾಗಿ ಅದರ ಅಭಿಪ್ರಾಯದಲ್ಲಿ, ವಿಚಾರಣೆಗೆ ಮಾಹಿತಿಯನ್ನು ಒದಗಿಸಲು ಅಥವಾ ಸುಸಂಬದ್ಧ ದಸ್ತಾವೇಜುಗಳನ್ನು ಹಾಜರುಪಡಿಸಲು ಅಥವಾ ವಿಚಾರಣೆಯಲ್ಲಿ ನೆರವು ನೀಡಲು ಸಮರ್ಥರಾಗಿರತಕ್ಕ ಯಾರೇ ಲೋಕ ನೌಕರ ಅಥವಾ ಇತರ

ಯಾರೇ ವ್ಯಕ್ತಿಯನ್ನು ಸದರಿ ಉದ್ದೇಶಕ್ಕಾಗಿ ಅವಶ್ಯವಾಗಬಹುದಾದಂತೆ ಅಂಥ ಯಾವುದೇ ಮಾಹಿತಿಯನ್ನು ಒದಗಿಸಲು ಅಥವಾ ಅಂಥ ಯಾವುದೇ ದಸ್ತಾವೇಜನ್ನು ಹಾಜರುಪಡಿಸಲು ಅಗತ್ಯಪಡಿಸಬಹುದು.

(2) ಅಂಥ ಯಾವುದೇ ವಿಚಾರಣೆಯ (ಪ್ರಾಥಮಿಕ ವಿಚಾರಣೆಯು ಒಳಗೊಂಡಂತೆ) ಉದ್ದೇಶಕ್ಕಾಗಿ, ಸಕ್ಷಮ ಪ್ರಾಧಿಕಾರವು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ದಾವೆಯ ಅಧಿವಿಚಾರಣೆ ನಡೆಸುವಾಗ ಈ ಕೆಳಕಂಡ ವಿಷಯಗಳ ಸಂಬಂಧದಲ್ಲಿ, ಸಿವಿಲ್ ನ್ಯಾಯಾಲಯದ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ಯಾರೇ ವ್ಯಕ್ತಿಯನ್ನು ಸಮನು ಮಾಡುವುದು ಮತ್ತು ಹಾಜರಾಗುವಂತೆ ಒತ್ತಾಯಿಸುವುದು ಹಾಗೂ ಪ್ರಮಾಣ ಮಾಡಿಸಿ ವಿಚಾರಣೆ ಮಾಡುವುದು;

(ಬಿ) ಯಾವುದೇ ದಸ್ತಾವೇಜನ್ನು ಪತ್ತೆ ಹಚ್ಚುವಂತೆ ಮತ್ತು ಹಾಜರುಪಡಿಸುವಂತೆ ಅಗತ್ಯಪಡಿಸುವುದು;

(ಸಿ) ಅಫಿಡಾವಿಟ್ ಗಳ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಯಾವುದೇ ನ್ಯಾಯಾಲಯದಿಂದ ಅಥವಾ ಕಚೇರಿಯಿಂದ ಯಾವುದೇ ಸರ್ಕಾರಿ ದಾಖಲೆಯನ್ನು ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು;

(ಇ) ಸಾಕ್ಷಿದಾರರ ವಿಚಾರಣೆಗಾಗಿ ಮತ್ತು ದಸ್ತಾವೇಜುಗಳ ಪರಿಶೀಲನೆಗಾಗಿ ಕಾರ್ಯಾಜ್ಞೆಗಳನ್ನು ಹೊರಡಿಸುವುದು;

(ಎಫ್) ನಿಯಮಿಸಬಹುದಾದಂಥ ಇತರ ವಿಷಯಗಳು.

(3) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 195ನೇ ಪ್ರಕರಣದ ಮತ್ತು ಅಧ್ಯಾಯ XXVIರ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರವನ್ನು ಸಿವಿಲ್ ನ್ಯಾಯಾಲಯವೆಂಬುದಾಗಿ ಭಾವಿಸತಕ್ಕದ್ದು ಮತ್ತು ಸಕ್ಷಮ ಪ್ರಾಧಿಕಾರದ ಮುಂದೆ ಇರುವ ಪ್ರತಿಯೊಂದು ವ್ಯವಹರಣೆಯನ್ನು, ಭಾರತ ದಂಡ ಸಂಹಿತೆ (1860ರ 45)ಯ 193ನೇ ಮತ್ತು 228ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಮತ್ತು 196ನೇ ಪ್ರಕರಣದ ಉದ್ದೇಶಗಳಿಗಾಗಿ ನ್ಯಾಯಿಕ ವ್ಯವಹರಣೆಯೆಂಬುದಾಗಿ ಭಾವಿಸತಕ್ಕದ್ದು.

(4) 8ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಸರ್ಕಾರವು ಅಥವಾ ಯಾರೇ ಲೋಕ ನೌಕರನು ಪಡೆದುಕೊಂಡ ಅಥವಾ ಅದಕ್ಕೆ/ಅವನಿಗೆ ಒದಗಿಸಲಾದ ಮಾಹಿತಿಯು ಬಹಿರಂಗಗೊಂಡ ಮೇಲೆ ರಹಸ್ಯವನ್ನು ಕಾಪಾಡಿಕೊಂಡು ಬರಲು ಅಥವಾ ಇತರ ನಿರ್ಬಂಧಕ್ಕೆ, ಅದು ಸರ್ಕಾರಿ ರಹಸ್ಯ ಅಧಿನಿಯಮ, 1923 (1923ರ 19)ರ ಮೂಲಕ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೂಲಕ ವಿಧಿಸಿರುವುದಾಗಿರಲೀ, ಸಕ್ಷಮ ಪ್ರಾಧಿಕಾರ ಅಥವಾ ಲಿಖಿತವಾಗಿ ಅದರಿಂದ ಅಧಿಕೃತಗೊಂಡ ಯಾರೇ ವ್ಯಕ್ತಿ ಅಥವಾ ಏಜೆನ್ಸಿಯ ಮುಂದಿರುವ ವ್ಯವಹರಣೆಗಳಲ್ಲಿ ಯಾರೇ ಲೋಕ ನೌಕರನು ಯಾವುದೇ ಬಾಧ್ಯತೆಯನ್ನು ಹೊಂದಿರತಕ್ಕದ್ದಲ್ಲ ಮತ್ತು ಸರ್ಕಾರ ಅಥವಾ ಯಾರೇ ಲೋಕ ನೌಕರನು, ಯಾವುದೇ ಅಧಿನಿಯಮಿತಿಯ ಮೂಲಕ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳ ಮೂಲಕ ಅನುಮತಿಸಲಾದಂತೆ ಅಂಥ ಯಾವುದೇ ವಿಚಾರಣೆಯ ಸಂಬಂಧದಲ್ಲಿ, ದಸ್ತಾವೇಜನ್ನು ಹಾಜರುಪಡಿಸುವ ಅಥವಾ ಸಾಕ್ಷ್ಯವನ್ನು ನೀಡುವ ಸಂಬಂಧದಲ್ಲಿ ಅಂಥ ಯಾವುದೇ ವಿಶೇಷಾಧಿಕಾರಕ್ಕೆ ಹಕ್ಕುಳ್ಳವನಾಗಿರತಕ್ಕದ್ದಲ್ಲ:

ಪರಂತು, ಸಕ್ಷಮ ಪ್ರಾಧಿಕಾರವು, ಸಿವಿಲ್ ನ್ಯಾಯಾಲಯದ ಅಂಥ ಅಧಿಕಾರಗಳನ್ನು ಚಲಾಯಿಸುವಾಗ, ದೂರನ್ನು ಸಲ್ಲಿಸಿರುವ ವ್ಯಕ್ತಿಯ ಗುರುತನ್ನು ಬಹಿರಂಗಪಡಿಸಿರುವುದಿಲ್ಲ ಅಥವಾ ಅವನನ್ನು ಅಪಾಯಕ್ಕೆ ಗುರಿಪಡಿಸಿರುವುದಿಲ್ಲ ಎಂಬುದನ್ನು ಖಚಿತಪಡಿಸಲು ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

**8. ಕೆಲವು ವಿಷಯಗಳನ್ನು ಬಹಿರಂಗಪಡಿಸುವುದರಿಂದ ವಿನಾಯಿತಿ.–** (1) ಈ ಅಧಿನಿಯಮದಲ್ಲಿ ಅಡಕವಾಗಿರುವ ಉಪಬಂಧಗಳ ಕಾರಣದಿಂದಾಗಿ, ಅಂಥ ಪ್ರಶ್ನೆ ಅಥವಾ ದಸ್ತಾವೇಜು ಅಥವಾ ಮಾಹಿತಿಯು, ಭಾರತದ ಸಾರ್ವಭೌಮತ್ವ ಮತ್ತು ಅಖಂಡತೆ, ರಾಷ್ಟ್ರದ ಭದ್ರತೆ, ವಿದೇಶಿ ರಾಷ್ಟ್ರಗಳೊಂದಿಗೆ ಸ್ನೇಹಪರ ಸಂಬಂಧಗಳು, ಸಾರ್ವಜನಿಕ ಸುವ್ಯವಸ್ಥೆ, ಸಭ್ಯತೆ ಅಥವಾ ನೈತಿಕತೆಯ ಹಿತಾಸಕ್ತಿಗೆ ಪ್ರತಿಕೂಲ ಪರಿಣಾಮ ಬೀರುವ ಸಂಭವವಿದ್ದರೆ ಅಥವಾ,–

(ಎ) ಕೇಂದ್ರ ಸರ್ಕಾರದ ಸಚಿವ ಸಂಪುಟ ಅಥವಾ ಸಚಿವ ಸಂಪುಟದ ಯಾವುದೇ ಸಮಿತಿಯ ವ್ಯವಹರಣೆಗಳ ಬಹಿರಂಗಪಡಿಸುವಿಕೆಯನ್ನು ಒಳಗೊಳ್ಳಬಹುದಾದ;

(ಬಿ) ರಾಜ್ಯ ಸರ್ಕಾರದ ಸಚಿವ ಸಂಪುಟ ಅಥವಾ ಸಚಿವ ಸಂಪುಟದ ಯಾವುದೇ ಸಮಿತಿಯ ವ್ಯವಹರಣೆಗಳ ಬಹಿರಂಗಪಡಿಸುವಿಕೆಯನ್ನು ಒಳಗೊಳ್ಳಬಹುದಾದ

– ನ್ಯಾಯಾಲಯದ ನಿಂದನೆಗೆ, ಮಾನನಷ್ಟ ಅಥವಾ ಅಪರಾಧದ ಚಿತಾವಣೆಗೆ ಸಂಬಂಧದಲ್ಲಿ, ಈ ಅಧಿನಿಯಮದ ಮೇರೆಗೆ ಅಂಥ ಯಾವುದೇ ಮಾಹಿತಿಯನ್ನು ಒದಗಿಸಲು ಅಥವಾ ಅಂಥ ಯಾವುದೇ ಪ್ರಶ್ನೆಗೆ ಉತ್ತರಿಸಲು ಅಥವಾ ಯಾವುದೇ ದಸ್ತಾವೇಜು ಅಥವಾ ಮಾಹಿತಿಯನ್ನು ಹಾಜರುಪಡಿಸಲು ಅಥವಾ ಇತರ ಯಾವುದೇ ವಿಚಾರಣೆಯಲ್ಲಿ ನೆರವನ್ನು ನೀಡಲು ಯಾರೇ ವ್ಯಕ್ತಿಯನ್ನು ಅಗತ್ಯಪಡಿಸತಕ್ಕದ್ದಲ್ಲ ಮತ್ತು ಈ ಉಪಪ್ರಕರಣದ ಉದ್ದೇಶಕ್ಕಾಗಿ ಯಾವುದೇ ಮಾಹಿತಿ, ಉತ್ತರ ಅಥವಾ ದಸ್ತಾವೇಜಿನ ಭಾಗವು (ಎ) ಖಂಡ ಅಥವಾ (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಸ್ವರೂಪದ್ದಾಗಿದೆ ಎಂದು ಪ್ರಮಾಣೀಕರಿಸುವ ಭಾರತ ಸರ್ಕಾರದ ಕಾರ್ಯದರ್ಶಿ ಅಥವಾ ಸಂದರ್ಭಾನುಸಾರ, ರಾಜ್ಯ ಸರ್ಕಾರದ ಕಾರ್ಯದರ್ಶಿ ಅಥವಾ ಕೇಂದ್ರ ಅಥವಾ ರಾಜ್ಯ ಸರ್ಕಾರವು ಹಾಗೆ ಅಧಿಕೃತಗೊಳಿಸಿದ ಯಾರೇ ಪ್ರಾಧಿಕಾರಿಯು ನೀಡಿದ ಪ್ರಮಾಣಪತ್ರವು ಬದ್ಧವಾಗಿರತಕ್ಕದ್ದು ಮತ್ತು ನಿರ್ಣಾಯಕವಾಗಿರತಕ್ಕದ್ದು.

(2) ಉಪಪ್ರಕರಣ (1)ರ ಉಪಬಂಧಗಳಿಗೆ ಒಳಪಟ್ಟು, ಯಾರೇ ವ್ಯಕ್ತಿಯನ್ನು ಈ ಅಧಿನಿಯಮದ ಮೇರೆಗಿನ ವಿಚಾರಣೆಯ ಉದ್ದೇಶಗಳಿಗಾಗಿ, ನ್ಯಾಯಾಲಯದ ಮುಂದೆ ಸಾಕ್ಷ್ಯವನ್ನು ನೀಡಲು ಅಥವಾ ವ್ಯವಹರಣೆಗಳಲ್ಲಿ ಹಾಜರುಪಡಿಸಲು ಒತ್ತಾಯಪಡಿಸಲಾಗದ್ದಂಥ ಯಾವುದೇ ಸಾಕ್ಷ್ಯವನ್ನು ನೀಡುವಂತೆ ಅಥವಾ ಯಾವುದೇ ದಸ್ತಾವೇಜನ್ನು ಹಾಜರುಪಡಿಸುವಂತೆ ಒತ್ತಾಯ ಮಾಡತಕ್ಕದ್ದಲ್ಲ.

**9. ಸೂಕ್ತ ಆಡಳಿತ ವ್ಯವಸ್ಥೆಯ ಮೇಲೆ ಸಕ್ಷಮ ಪ್ರಾಧಿಕಾರದ ಅಧೀಕ್ಷಣೆ.–** (1) ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರವು, 5ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಅದಕ್ಕೆ ಕಳುಹಿಸಲಾದ ಬಹಿರಂಗಪಡಿಸುವಿಕೆಗಳ ಬಗ್ಗೆ ವ್ಯವಹರಿಸುವ ಅಥವಾ ವಿಚಾರಣೆ ಮಾಡುವ ಉದ್ದೇಶಗಳಿಗಾಗಿ ಸಮುಚಿತ ಆಡಳಿತ ವ್ಯವಸ್ಥೆಯನ್ನು ಸೃಜಿಸತಕ್ಕದ್ದು.

(2) ಸಕ್ಷಮ ಪ್ರಾಧಿಕಾರವು, ಬಹಿರಂಗಪಡಿಸಿರುವುದನ್ನು ವ್ಯವಹರಿಸುವ ಅಥವಾ ವಿಚಾರಣೆ ಮಾಡುವ ಉದ್ದೇಶಗಳಿಗಾಗಿ, (1)ನೇ ಉಪಪ್ರಕರಣದ ಮೇರೆಗೆ ಸೃಜಿಸಿದ ಆಡಳಿತ ವ್ಯವಸ್ಥೆಯ ಕಾರ್ಯನಿರ್ವಹಣೆಯ ಮೇಲೆ ಅಧೀಕ್ಷಣೆಯನ್ನು ಚಲಾಯಿಸತಕ್ಕದ್ದು ಮತ್ತು ಅದರ ಯುಕ್ತ ಪ್ರಕಾರ್ಯ ನಿರ್ವಹಣೆಗಾಗಿ ಅದು ಕಾಲಕಾಲಕ್ಕೆ ಅವಶ್ಯವೆಂದು ಪರಿಗಣಿಸಬಹುದಾದಂಥ ನಿರ್ದೇಶನಗಳನ್ನು ನೀಡತಕ್ಕದ್ದು.

**10. ಸಕ್ಷಮ ಪ್ರಾಧಿಕಾರವು ಕೆಲವು ಪ್ರಕರಣಗಳಲ್ಲಿ ಪೊಲೀಸ್ ಪ್ರಾಧಿಕಾರಿ, ಮುಂತಾದವರ ನೆರವನ್ನು ತೆಗೆದುಕೊಳ್ಳುವುದು.–** ಸಕ್ಷಮ ಪ್ರಾಧಿಕಾರವು, ಸಂಬಂಧಪಟ್ಟ ಸಂಸ್ಥೆಯಿಂದ ವಿವೇಚನಾಯುಕ್ತ ವಿಚಾರಣೆ ಮಾಡುವ ಅಥವಾ

ಮಾಹಿತಿಯನ್ನು ಪಡೆಯುವ ಉದ್ದೇಶಕ್ಕಾಗಿ, ಅದು ಸ್ವೀಕರಿಸಿದ ಬಹಿರಂಗಪಡಿಸುವಿಕೆಯ ಅನುಸಾರವಾಗಿ, ನಿಯಮಿಸಲಾದ ಕಾಲದೊಳಗೆ ವಿಚಾರಣೆಯನ್ನು ಪೂರ್ಣಗೊಳಿಸುವುದಕ್ಕೆ ಎಲ್ಲ ನೆರವನ್ನು ಪಡೆಯಲು ಅವಶ್ಯವೆಂದು ಪರಿಗಣಿಸಬಹುದಾದಂತೆ, ದೆಹಲಿ ವಿಶೇಷ ಪೊಲೀಸ್ ಸಿಬ್ಬಂದಿ ಅಥವಾ ಪೊಲೀಸ್ ಪ್ರಾಧಿಕಾರಿಗಳ ಅಥವಾ ಇತರ ಯಾವುದೇ ಪ್ರಾಧಿಕಾರದ ನೆರವನ್ನು ಪಡೆಯಲು ಅಧಿಕಾರ ಹೊಂದಿರತಕ್ಕದ್ದು.

## ಅಧ್ಯಾಯ V

### ಬಹಿರಂಗಪಡಿಸಿರುವ ವ್ಯಕ್ತಿಗಳಿಗೆ ಸಂರಕ್ಷಣೆ

**11. ಬಲಿಪಶು ಮಾಡುವುದರ ವಿರುದ್ಧ ರಕ್ಷಣೆ.–** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ಬಹಿರಂಗಪಡಿಸಿರುವ ಯಾರೇ ವ್ಯಕ್ತಿ ಅಥವಾ ಲೋಕ ನೌಕರನನ್ನು, ಈ ಅಧಿನಿಯಮದ ಮೇರೆಗಿನ ವಿಚಾರಣೆಯಲ್ಲಿ ಅಂಥ ವ್ಯಕ್ತಿಯು ಅಥವಾ ಲೋಕ ನೌಕರನು ಕೇವಲ ಬಹಿರಂಗಪಡಿಸಿದ್ದಾನೆಂಬ ಅಥವಾ ನೆರವನ್ನು ನೀಡಿದ್ದಾನೆಂಬ ಕಾರಣ ಮಾತ್ರದಿಂದಲೇ ಯಾವುದೇ ವ್ಯವಹರಣೆಗಳನ್ನು ಪ್ರಾರಂಭಿಸುವ ಮೂಲಕ ಅಥವಾ ಅನ್ಯಥಾ ಬಲಿಪಶು ಮಾಡಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ಯಾರೇ ವ್ಯಕ್ತಿಯನ್ನು, ಆತನು ದೂರು ದಾಖಲಿಸಿದ್ದಾನೆಂಬ ಅಥವಾ ಬಹಿರಂಗಪಡಿಸಿರುವನೆಂಬ ಅಥವಾ ವಿಚಾರಣೆಯಲ್ಲಿ ನೆರವು ನೀಡಿದ್ದಾನೆಂಬ ಕಾರಣದ ಮೇಲೆ ಬಲಿಪಶು ಮಾಡಲಾಗುತ್ತಿದ್ದರೆ ಅಥವಾ ಬಲಿಪಶು ಮಾಡುವ ಸಂಭವವಿದ್ದರೆ, ಅವನು, ಆ ವಿಷಯದ ಬಗ್ಗೆ ಪರಿಹಾರ ಕೋರಿ, ಸಕ್ಷಮ ಪ್ರಾಧಿಕಾರದ ಮುಂದೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಅಂಥ ಪ್ರಾಧಿಕಾರವು, ಸೂಕ್ತವೆಂದು ಭಾವಿಸುವಂಥ ಕ್ರಮವನ್ನು ತೆಗೆದುಕೊಂಡು, ಅಂಥ ವ್ಯಕ್ತಿಯು ಬಲಿಪಶುವಾಗುವುದರಿಂದ ರಕ್ಷಿಸಲು ಅಥವಾ ಆತನು ಬಲಿಪಶುವಾಗುವುದನ್ನು ತಪ್ಪಿಸಲು ಸಂಬಂಧಪಟ್ಟ ಲೋಕ ನೌಕರ ಅಥವಾ ಸಂದರ್ಭಾನುಸಾರ, ಸಾರ್ವಜನಿಕ ಪ್ರಾಧಿಕಾರಕ್ಕೆ ಸೂಕ್ತ ನಿರ್ದೇಶನಗಳನ್ನು ನೀಡಬಹುದು:

ಪರಂತು, ಸಕ್ಷಮ ಪ್ರಾಧಿಕಾರವು, ಸಾರ್ವಜನಿಕ ಪ್ರಾಧಿಕಾರಕ್ಕೆ ಅಥವಾ ಲೋಕ ನೌಕರನಿಗೆ ಅಂಥ ಯಾವುದೇ ನಿರ್ದೇಶನ ನೀಡುವ ಮುನ್ನ, ದೂರುದಾರನಿಗೆ ಮತ್ತು ಸಂದರ್ಭಾನುಸಾರ, ಸಾರ್ವಜನಿಕ ಪ್ರಾಧಿಕಾರಕ್ಕೆ ಅಥವಾ ಲೋಕ ನೌಕರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡತಕ್ಕದ್ದು:

ಮತ್ತು ಪರಂತು, ಅಂಥ ಯಾವುದೇ ಸುನಾವಣೆಯಲ್ಲಿ, ಸಾರ್ವಜನಿಕ ಪ್ರಾಧಿಕಾರದ ಕಡೆಯಿಂದ ಆಪಾದಿಸಲಾದ ಕ್ರಮದಿಂದ ಬಲಿಪಶು ಮಾಡಿರುವುದಿಲ್ಲವೆಂಬುದನ್ನು ರುಜುವಾತುಪಡಿಸುವ ಹೊಣೆಗಾರಿಕೆಯು ಸಾರ್ವಜನಿಕ ಪ್ರಾಧಿಕಾರದ ಮೇಲೆ ಇರತಕ್ಕದ್ದು.

(3) ಸಕ್ಷಮ ಪ್ರಾಧಿಕಾರವು (2)ನೇ ಉಪಪ್ರಕರಣದ ಮೇರೆಗೆ ನೀಡಿದ ಪ್ರತಿಯೊಂದು ನಿರ್ದೇಶನವು, ಯಾರ ವಿರುದ್ಧ ಬಲಿಪಶು ಮಾಡಿರುವ ಆಪಾದನೆಯು ರುಜುವಾತುಪಡಿಸಲಾಗಿದೆಯೋ ಆ ಲೋಕ ನೌಕರ ಅಥವಾ ಸಾರ್ವಜನಿಕ ಪ್ರಾಧಿಕಾರಿಗೆ ಬಂಧನಕಾರಿಯಾಗಿರತಕ್ಕದ್ದು.

(4) ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಲೋಕ ನೌಕರನ ಸಂಬಂಧದಲ್ಲಿ, (2)ನೇ ಉಪಪ್ರಕರಣದ ಮೇರೆಗೆ ನಿರ್ದೇಶನಗಳನ್ನು ನೀಡುವ ಅಧಿಕಾರವು, ಬಹಿರಂಗಪಡಿಸುವ ಲೋಕ ನೌಕರನನ್ನು ಯಥಾಪೂರ್ವ ಸ್ಥಿತಿಗೆ ತರುವಂತೆ ನಿರ್ದೇಶಿಸುವ ಅಧಿಕಾರವನ್ನು ಒಳಗೊಂಡಿರತಕ್ಕದ್ದು.

(5) ಉಪಪ್ರಕರಣ (2)ರ ಮೇರೆಗೆ ಸಕ್ಷಮ ಪ್ರಾಧಿಕಾರದ ನಿರ್ದೇಶನವನ್ನು ಉದ್ದೇಶಪೂರ್ವಕವಾಗಿ ಪಾಲಿಸದಿರುವ ಯಾರೇ ವ್ಯಕ್ತಿ ಮೂವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡನೆಗೆ ಗುರಿಯಾಗತಕ್ಕದ್ದು.

**12. ಸಾಕ್ಷಿದಾರರು ಮತ್ತು ಇತರ ವ್ಯಕ್ತಿಗಳ ಸಂರಕ್ಷಣೆ.–** ಸಕ್ಷಮ ಪ್ರಾಧಿಕಾರವು, ದೂರುದಾರ ಅಥವಾ ಸಾಕ್ಷಿದಾರರು ಸಲ್ಲಿಸಿದ ಅರ್ಜಿಯ ಮೇಲಾಗಲೀ ಅಥವಾ ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲಾಗಲೀ, ಈ ಅಧಿನಿಯಮದ ಮೇರೆಗೆ ದೂರುದಾರನನ್ನಾಗಲೀ ಅಥವಾ ಲೋಕ ನೌಕರನನ್ನಾಗಲೀ ಅಥವಾ ಸಾಕ್ಷಿದಾರರನ್ನಾಗಲೀ ಅಥವಾ ವಿಚಾರಣೆಗಾಗಿ ನೆರವನ್ನು ನೀಡಿರುವ ಯಾರೇ ವ್ಯಕ್ತಿಯನ್ನಾಗಲೀ ಸಂರಕ್ಷಿಸುವುದು ಅಗತ್ಯವಿದೆಯೆಂದು ಅಭಿಪ್ರಾಯಪಟ್ಟರೆ, ಸಕ್ಷಮ ಪ್ರಾಧಿಕಾರವು, ಅಂಥ ದೂರುದಾರ ಅಥವಾ ಲೋಕ ನೌಕರ ಅಥವಾ ಸಂಬಂಧಪಟ್ಟ ವ್ಯಕ್ತಿಗಳನ್ನು ಸಂರಕ್ಷಿಸಲು ಅದರ ಏಜೆನ್ಸಿಗಳ ಮುಖಾಂತರ ಯಾವ ಸರ್ಕಾರಿ ಪ್ರಾಧಿಕಾರಿಗಳು ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದೋ ಆ ಸಂಬಂಧಪಟ್ಟ ಸರ್ಕಾರಿ ಪ್ರಾಧಿಕಾರಿಗಳಿಗೆ (ಪೊಲೀಸ್ ಸೇರಿದಂತೆ) ಯುಕ್ತ ನಿರ್ದೇಶನಗಳನ್ನು ನೀಡತಕ್ಕದ್ದು.

**13. ದೂರುದಾರನ ಗುರುತಿನ ಸಂರಕ್ಷಣೆ.–** ತತ್ಕಾಲದಲ್ಲಿ ಯಾವುದೇ ಕಾನೂನು ಜಾರಿಯಲ್ಲಿದ್ದರೂ, ಸಕ್ಷಮ ಪ್ರಾಧಿಕಾರವು, ಸ್ವತಃ ಅನ್ಯಥಾ ಹಾಗೆ ನಿರ್ಧರಿಸಿದ್ದನ್ನು ಅಥವಾ ನ್ಯಾಯಾಲಯದ ಆದೇಶದ ಕಾರಣದಿಂದಾಗಿ ಅದನ್ನು ಪ್ರಕಟಪಡಿಸಲು ಅಥವಾ ಹಾಜರುಪಡಿಸಲು ಅಗತ್ಯಪಡಿಸಿರುವುದನ್ನು ಹೊರತುಪಡಿಸಿ, ಈ ಅಧಿನಿಯಮದ ಮೇರೆಗಿನ ವಿಚಾರಣೆಯ ಉದ್ದೇಶಗಳಿಗಾಗಿ, ದೂರುದಾರನ ಗುರುತನ್ನು ಮತ್ತು ಆತನು ಒದಗಿಸಿದ ದಸ್ತಾವೇಜುಗಳನ್ನು ಅಥವಾ ಮಾಹಿತಿಯನ್ನು ಈ ಅಧಿನಿಯಮದ ಮೇರೆಗೆ ಅಗತ್ಯಪಡಿಸಿದಂತೆ ಗೌಪ್ಯವಾಗಿಡತಕ್ಕದ್ದು.

**14. ಮಧ್ಯಂತರ ಆದೇಶಗಳನ್ನು ಹೊರಡಿಸುವ ಅಧಿಕಾರ.–** ಸಕ್ಷಮ ಪ್ರಾಧಿಕಾರವು, ದೂರುದಾರನು ಅಥವಾ ಲೋಕ ನೌಕರನು ಬಹಿರಂಗಪಡಿಸಿದ ತರುವಾಯ, ಯಾವುದೇ ಸಮಯದಲ್ಲಿ ಸದರಿ ಉದ್ದೇಶಕ್ಕಾಗಿ ಯಾವುದೇ ವಿಚಾರಣೆ ಮುಂದುವರಿದ ಅವಧಿಯಲ್ಲಿ ಯಾವುದೇ ಭ್ರಷ್ಟ ಪದ್ಧತಿಯನ್ನು ನಿಲ್ಲಿಸುವುದು ಅಗತ್ಯವಾಗಿದೆಯೆಂದು ಅಭಿಪ್ರಾಯಪಟ್ಟರೆ, ಅಂಥ ಪದ್ಧತಿಯನ್ನು ಆ ಕೂಡಲೇ ತಡೆಯಲು ಅದು ಸೂಕ್ತ ಎಂದು ಭಾವಿಸಬಹುದಾದಂಥ ಮಧ್ಯಂತರ ಆದೇಶಗಳನ್ನು ಹೊರಡಿಸಬಹುದು.

## ಅಧ್ಯಾಯ VI

## ಅಪರಾಧಗಳು ಮತ್ತು ದಂಡನೆಗಳು

**15. ಅಪೂರ್ಣ ಅಥವಾ ಸರಿಯಲ್ಲದ ಅಥವಾ ದಾರಿ ತಪ್ಪಿಸುವ ಅಭಿಪ್ರಾಯಗಳು ಅಥವಾ ವಿವರಣೆ ಅಥವಾ ವರದಿಯನ್ನು ಒದಗಿಸುವುದಕ್ಕಾಗಿ ದಂಡನೆ.–** ಸಕ್ಷಮ ಪ್ರಾಧಿಕಾರವು, ಸಂಸ್ಥೆ ಅಥವಾ ಸಂಬಂಧಪಟ್ಟ ಅಧಿಕಾರಿಯು ಸಲ್ಲಿಸಿದ ದೂರಿನ ಮೇಲೆ ವರದಿ ಮತ್ತು ವಿವರಣೆಗಳನ್ನು, 5ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ವರದಿಯನ್ನು ಪರೀಕ್ಷಿಸುವ ಸಮಯದಲ್ಲಿ, ಸಂಸ್ಥೆ ಅಥವಾ ಸಂಬಂಧಪಟ್ಟ ಅಧಿಕಾರಿ ಯಾವುದೇ ಯುಕ್ತ ಕಾರಣವಿಲ್ಲದೆ ನಿರ್ದಿಷ್ಟಪಡಿಸಿದ ಸಮಯದೊಳಗೆ ವರದಿ ಒದಗಿಸಿಲ್ಲವೆಂದು ಅಥವಾ ದುರುದ್ದೇಶಪೂರ್ವಕವಾಗಿ ವರದಿಯನ್ನು ಸಲ್ಲಿಸಲು ನಿರಾಕರಿಸಿರುವನೆಂದು ಅಥವಾ ಗೊತ್ತಿದ್ದೂ ಅಪೂರ್ಣ, ತಪ್ಪಾದ ಅಥವಾ ದಾರಿ ತಪ್ಪಿಸುವ ಅಥವಾ ಸುಳ್ಳು ವರದಿ ನೀಡಿರುವನೆಂದು ಅಥವಾ ಬಹಿರಂಗಪಡಿಸುವ ವಿಷಯವಾಗಿದ್ದ ದಾಖಲೆಯನ್ನು ಅಥವಾ ಮಾಹಿತಿಯನ್ನು ನಾಶಪಡಿಸಿರುವನೆಂದು ಅಥವಾ ವರದಿಯನ್ನು ಸಲ್ಲಿಸುವಲ್ಲಿ ಯಾವುದೇ ರೀತಿಯಲ್ಲಿ ಅಡ್ಡಿಯುಂಟುಮಾಡಿರುವನೆಂದು ಅಭಿಪ್ರಾಯಪಟ್ಟರೆ, ಅದು,–

(ಎ) ಸಂಬಂಧಪಟ್ಟ ಸಂಸ್ಥೆ ಅಥವಾ ಅಧಿಕಾರಿಯು, ಯಾವುದೇ ಯುಕ್ತ ಕಾರಣವಿಲ್ಲದೆ ನಿರ್ದಿಷ್ಟಪಡಿಸಲಾದ ಸಮಯದೊಳಗೆ ವರದಿಯನ್ನು ಒದಗಿಸಿಲ್ಲದಿದ್ದಲ್ಲಿ ಅಥವಾ ದುರುದ್ದೇಶಪೂರ್ವಕವಾಗಿ ವರದಿಯನ್ನು ಸಲ್ಲಿಸಲು ನಿರಾಕರಿಸಿದ್ದಲ್ಲಿ, ವರದಿಯನ್ನು ಸಲ್ಲಿಸುವವರೆಗೆ ಪ್ರತಿದಿನಕ್ಕಾಗಿ ಇನ್ನೂರೈವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡನೆಯನ್ನು ವಿಧಿಸತಕ್ಕದ್ದು, ಆದಾಗ್ಯೂ, ಹಾಗೆ ವಿಧಿಸಿದಂಥ ದಂಡನೆಯ ಒಟ್ಟು ಮೊತ್ತವು ಐವತ್ತು ಸಾವಿರ ರೂಪಾಯಿಗಳನ್ನು ಮೀರತಕ್ಕದ್ದಲ್ಲ;

(ಬಿ) ಸಂಬಂಧಪಟ್ಟ ಸಂಸ್ಥೆ ಅಥವಾ ಅಧಿಕಾರಿಯು, ಗೊತ್ತಿದ್ದೂ ಅಪೂರ್ಣ, ತಪ್ಪಾದ ಅಥವಾ ದಾರಿತಪ್ಪಿಸುವ ಅಥವಾ ಸುಳ್ಳು ವರದಿಯನ್ನು ನೀಡಿದ್ದಲ್ಲಿ ಅಥವಾ ಬಹಿರಂಗಪಡಿಸುವ ವಿಷಯವಾಗಿದ್ದ ದಾಖಲೆ ಅಥವಾ ಮಾಹಿತಿಯನ್ನು ನಾಶಗೊಳಿಸಿದ್ದಲ್ಲಿ ಅಥವಾ ವರದಿಯನ್ನು ಒದಗಿಸಲು ಯಾವುದೇ ರೀತಿಯಲ್ಲಿ ಅಡ್ಡಿಯುಂಟು ಮಾಡಿದ್ದಲ್ಲಿ, ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡನೆಯನ್ನು ವಿಧಿಸತಕ್ಕದ್ದು:

ಪರಂತು, ಯಾರೇ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ್ದ ಹೊರತು, ಆತನಿಗೆ ಯಾವುದೇ ದಂಡನೆಯನ್ನು ವಿಧಿಸತಕ್ಕದ್ದಲ್ಲ.

**16. ದೂರುದಾರನ ಗುರುತನ್ನು ಬಹಿರಂಗಪಡಿಸುವುದಕ್ಕಾಗಿ ದಂಡನೆ.–** ದೂರುದಾರನ ಗುರುತನ್ನು ನಿರ್ಲಕ್ಷ್ಯತನದಿಂದ ಅಥವಾ ದುರುದ್ದೇಶದಿಂದ ಬಹಿರಂಗಪಡಿಸಿರುವ ಯಾರೇ ವ್ಯಕ್ತಿಯು, ಈ ಅಧಿನಿಯಮದ ಇತರ ಉಪಬಂಧಗಳಿಗೆ ಬಾಧಕವಾಗದಂತೆ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದಲೂ ಸಹ ದಂಡಿತನಾಗತಕ್ಕದ್ದು.

**17. ಸುಳ್ಳು ಅಥವಾ ಕ್ಷುಲಕ ಬಹಿರಂಗಪಡಿಸುವಿಕೆಗಾಗಿ ದಂಡನೆ.–** ಯಾರೇ ವ್ಯಕ್ತಿಯು ದುರುದ್ದೇಶದಿಂದ ಅಥವಾ ಅದು ತಪ್ಪಾದ ಅಥವಾ ಸುಳ್ಳಾದ ಅಥವಾ ದಾರಿ ತಪ್ಪಿಸುವುದಾಗಿದೆಯೆಂದು ಗೊತ್ತಿದ್ದೂ ಯಾವುದೇ ಬಹಿರಂಗಪಡಿಸುವಿಕೆಯನ್ನು ಮಾಡಿದರೆ, ಆತನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರವಾಸದಿಂದ ಮತ್ತು ಮೂವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದಲೂ ದಂಡಿತನಾಗತಕ್ಕದ್ದು.

**18. ಕೆಲವು ಸಂದರ್ಭಗಳಲ್ಲಿ ಇಲಾಖಾ ಮುಖ್ಯಸ್ಥನಿಗೆ ದಂಡನೆ.–** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಯಾವುದೇ ಸರ್ಕಾರದ ಇಲಾಖೆಯು ಮಾಡಲಾಗಿದ್ದಲ್ಲಿ, ಆ ಇಲಾಖೆಯ ಮುಖ್ಯಸ್ಥನನ್ನು ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಆ ಅಪರಾಧವು ಆತನ ತಿಳುವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ಮಾಡುವುದನ್ನು ತಡೆಗಟ್ಟಲು ತಾನು ಯುಕ್ತ ಜಾಗರೂಕತೆ ವಹಿಸಿದ್ದೇನೆಂದು ಅವನು ರುಜುವಾತುಪಡಿಸಿದ ಹೊರತು, ತನ್ನ ವಿರುದ್ಧದ ವ್ಯವಹರಣೆಗೆ ಮತ್ತು ತದನುಸಾರವಾಗಿ ದಂಡನೆಗೆ ಗುರಿಯಾಗತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಸರ್ಕಾರದ ಇಲಾಖೆಯು ಮಾಡಿದ್ದಲ್ಲಿ ಮತ್ತು ಆ ಅಪರಾಧವು ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆದಿದೆಯೆಂದು ಅಥವಾ ಅಧಿಕಾರಿಗೆ ಆರೋಪಿಸಿಬಹುದಾಗಿದೆ ಎಂಬುದು ರುಜುವಾತಾದರೆ, ಅಂಥ ಅಧಿಕಾರಿಯನ್ನು ಸಹ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅಂಥ ಅಧಿಕಾರಿಯು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

**19. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿದ್ದಲ್ಲಿ, ಆ ಅಪರಾಧವು ನಡೆದ ಕಾಲದಲ್ಲಿ ಕಂಪನಿಯ ಪ್ರಭಾರ ಹೊಂದಿದ್ದ ಮತ್ತು ಅದರ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಆ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥನಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ಅವನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಅಂಥ ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಯಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದೇನೆಂದು ಅವನು ರುಜುವಾತುಪಡಿಸಿದರೆ, ಅಂಥ ಯಾರೇ ವ್ಯಕ್ತಿಯನ್ನು ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವನ್ನು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಮಾಡಲಾಗಿದೆಯೆಂದು ಅಥವಾ ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ ಅಥವಾ ಅಧಿಕಾರಿಯು ಯಾವುದೇ ನಿರ್ಲಕ್ಷ್ಯತನದಿಂದ ಮಾಡಲಾಗಿದೆಯೆಂದು ಆರೋಪಿಸಲಾಗಿರುವುದು ರುಜುವಾತಾಗಿದ್ದಲ್ಲಿ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತನಾಗತಕ್ಕದ್ದು.

*ವಿವರಣೆ.–* ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯವನ್ನು ಮತ್ತು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) "ನಿರ್ದೇಶಕ" ಎಂದರೆ, ಫರ್ಮಿಗೆ ಸಂಬಂಧಿಸಿದಂತೆ ಆ ಫರ್ಮಿನ ಒಬ್ಬ ಪಾಲುದಾರ.

**20. ಉಚ್ಚ ನ್ಯಾಯಾಲಯಕ್ಕೆ ಅಪೀಲು.–** 14ನೇ ಪ್ರಕರಣ ಅಥವಾ 15ನೇ ಪ್ರಕರಣ ಅಥವಾ 16ನೇ ಪ್ರಕರಣದ ಮೇರೆಗೆ ದಂಡವನ್ನು ವಿಧಿಸುವುದಕ್ಕೆ ಸಂಬಂಧಪಟ್ಟಂತೆ, ಸಕ್ಷಮ ಪ್ರಾಧಿಕಾರದ ಯಾವುದೇ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಯಾವ ಆದೇಶದ ವಿರುದ್ಧ ಅಪೀಲು ಸಲ್ಲಿಸಲಾಗುತ್ತಿದೆಯೋ ಆ ಆದೇಶದ ದಿನಾಂಕದಿಂದ ಅರವತ್ತು ದಿನಗಳ ಅವಧಿಯೊಳಗಾಗಿ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು:

ಪರಂತು, ಅರ್ಜಿದಾರನು ಅಪೀಲನ್ನು ಸಕಾಲದಲ್ಲಿ ಸಲ್ಲಿಸುವುದಕ್ಕೆ ಸಾಕಷ್ಟು ಕಾರಣಗಳಿಂದಾಗಿ ಪ್ರತಿಬಂಧಿತನಾಗಿದ್ದನೆಂದು ಉಚ್ಚ ನ್ಯಾಯಾಲಯಕ್ಕೆ ಮನದಟ್ಟಾದರೆ, ಸದರಿ ಅರವತ್ತು ದಿನಗಳ ಅವಧಿಯು ಮುಕ್ತಾಯವಾದ ತರುವಾಯವು ಅಪೀಲನ್ನು ಪುರಸ್ಕರಿಸಬಹುದು.

*ವಿವರಣೆ.–* ಈ ಪ್ರಕರಣದ ಉದ್ದೇಶಕ್ಕಾಗಿ, "ಉಚ್ಚ ನ್ಯಾಯಾಲಯ" ಎಂದರೆ, ಯಾವ ಉಚ್ಚ ನ್ಯಾಯಾಲಯದ ಅಧಿಕಾರವ್ಯಾಪ್ತಿಯೊಳಗೆ ವ್ಯಾಜ್ಯ ಕಾರಣ ಉದ್ಭವಿಸಿರುವುದೋ ಆ ಉಚ್ಚ ನ್ಯಾಯಾಲಯ.

**21. ಅಧಿಕಾರವ್ಯಾಪ್ತಿಯ ಪ್ರತಿಷೇಧ.–** ಯಾವುದೇ ಸಿವಿಲ್ ನ್ಯಾಯಾಲಯವು, ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಯಾವ ವಿಷಯದ ಸಂಬಂಧದಲ್ಲಿ ಸಕ್ಷಮ ಪ್ರಾಧಿಕಾರವು ಅಧಿಕಾರವುಳ್ಳದ್ದಾಗಿರುವುದೋ ಆ ವಿಷಯವನ್ನು

ನಿರ್ಧರಿಸುವ ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ ಮತ್ತು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಪ್ರದತ್ತವಾದ ಯಾವುದೇ ಅಧಿಕಾರದ ಅನುಸರಣೆಯಲ್ಲಿ ಕೈಗೊಂಡ ಅಥವಾ ಕೈಗೊಳ್ಳಬೇಕಾದ ಯಾವುದೇ ಕ್ರಮದ ಸಂಬಂಧದಲ್ಲಿ, ಯಾವುದೇ ನ್ಯಾಯಾಲಯ ಅಥವಾ ಇತರ ಪ್ರಾಧಿಕಾರವು ಯಾವುದೇ ನಿರ್ಬಂಧಕಾಜ್ಞೆಯನ್ನು ನೀಡತಕ್ಕದ್ದಲ್ಲ.

**22. ನ್ಯಾಯಾಲಯವು ಸಂಜ್ಞೇಯತೆಗೆ ತೆಗೆದುಕೊಳ್ಳುವುದು.–** (1) ಯಾವುದೇ ನ್ಯಾಯಾಲಯವು, ಸಕ್ಷಮ ಪ್ರಾಧಿಕಾರ ಅಥವಾ ಅದು ಅಧಿಕೃತಗೊಳಿಸಿದ ಯಾರೇ ಅಧಿಕಾರಿ ಅಥವಾ ವ್ಯಕ್ತಿಯು ಸಲ್ಲಿಸಿದ ದೂರನ್ನುಳಿದು, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಅಥವಾ ವಿನಿಯಮಗಳ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ.

(2) ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಅಥವಾ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕಿಂತ ಕೆಳದರ್ಜೆಯ ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಅಧಿವಿಚಾರಣೆ ಮಾಡತಕ್ಕದ್ದಲ್ಲ.

## ಅಧ್ಯಾಯ VII

### ಸಂಕೀರ್ಣ

**23. ಬಹಿರಂಗಪಡಿಸುವಿಕೆಗಳ ಬಗ್ಗೆ ವರದಿ.–** (1) ಸಕ್ಷಮ ಪ್ರಾಧಿಕಾರವು, ನಿಯಮಿಸಬಹುದಾದಂಥ ನಮೂನೆಗಳಲ್ಲಿ ತನ್ನ ಕಾರ್ಯಚಟುವಟಿಕೆಗಳ ಕಾರ್ಯಕ್ಷಮತೆಯ ಕ್ರೋಢೀಕೃತ ವಾರ್ಷಿಕ ವರದಿಯನ್ನು ತಯಾರಿಸತಕ್ಕದ್ದು ಮತ್ತು ಸಂದರ್ಭಾನುಸಾರ, ಕೇಂದ್ರ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರಕ್ಕೆ ಅದನ್ನು ಕಳುಹಿಸಿಕೊಡತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗಿನ ವಾರ್ಷಿಕ ವರದಿಯನ್ನು ಸ್ವೀಕರಿಸಿದ ಮೇಲೆ, ಸಂದರ್ಭಾನುಸಾರ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು, ಸಂದರ್ಭಾನುಸಾರ, ಸಂಸತ್ತಿನ ಪ್ರತಿಯೊಂದು ಸದನದ ಅಥವಾ ರಾಜ್ಯ ವಿಧಾನಮಂಡಲದ ಮುಂದೆ ಅದರ ಪ್ರತಿಯನ್ನು ಇಡುವಂತೆ ಮಾಡತಕ್ಕದ್ದು:

ಪರಂತು, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನು, ಸಕ್ಷಮ ಪ್ರಾಧಿಕಾರವು ಅಂಥ ವಾರ್ಷಿಕ ವರದಿ ಸಿದ್ಧಪಡಿಸುವುದನ್ನು ಉಪಬಂಧಿಸಿದ್ದಲ್ಲಿ, ಆಗ ಸದರಿ ವಾರ್ಷಿಕ ವರದಿಯನ್ನು ಸಕ್ಷಮ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ನಿರ್ವಹಣೆ ಕುರಿತಂತೆ ಪ್ರತ್ಯೇಕ ಭಾಗವನ್ನು ಒಳಗೊಂಡಿರತಕ್ಕದ್ದು.

**24. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ.–** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಬೇಕೆಂದು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರದ ವಿರುದ್ಧ ಅಥವಾ ಯಾರೇ ಅಧಿಕಾರಿ, ನೌಕರರು, ಏಜೆನ್ಸಿ ಅಥವಾ ಅದರ ಪರವಾಗಿ ಕಾರ್ಯನಿರ್ವಹಿಸುವ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**25. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 4ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಲಿಖಿತವಾಗಿ ಅಥವಾ ಸಮುಚಿತ ವಿದ್ಯುನ್ಮಾನ ಸಾಧನಗಳ ಮೂಲಕ ಬಹಿರಂಗಪಡಿಸುವಿಕೆಗಾಗಿ ಕಾರ್ಯವಿಧಾನ;

(ಬಿ) 5ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸಕ್ಷಮ ಪ್ರಾಧಿಕಾರವು ಯಾವ ರೀತಿಯಲ್ಲಿ ಮತ್ತು ಯಾವ ಸಮಯದೊಳಗೆ ವಿವೇಚನಾಯುಕ್ತ ವಿಚಾರಣೆ ಮಾಡತಕ್ಕದ್ದೋ ಆ ರೀತಿ ಮತ್ತು ಸಮಯ;

(ಸಿ) 7ನೇ ಪ್ರಕರಣದ (2)ನೇ ಉಪಪ್ರಕರಣದ (ಎಫ್) ಖಂಡದ ಮೇರೆಗೆ ಯಾವ ಹೆಚ್ಚುವರಿ ವಿಷಯದ ಸಂಬಂಧದಲ್ಲಿ ಸಕ್ಷಮ ಪ್ರಾಧಿಕಾರವು ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಚಲಾಯಿಸಬಹುದಾಗಿದೆಯೋ ಆ ಹೆಚ್ಚುವರಿ ವಿಷಯ;

(ಡಿ) 23ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವಾರ್ಷಿಕ ವರದಿಯ ನಮೂನೆ;

(ಇ) ಯಾವ ಇತರ ವಿಷಯವನ್ನು ಅಗತ್ಯಪಡಿಸಬೇಕಾಗಿದೆಯೋ ಅಥವಾ ನಿಯಮಿಸಬಹುದಾಗಿದೆಯೋ ಆ ಯಾವುದೇ ಇತರ ವಿಷಯ.

**26. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.–** ರಾಜ್ಯ ಸರ್ಕಾರವು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸಬಹುದು.

**27. ವಿನಿಯಮಗಳನ್ನು ರಚಿಸಲು ಅಧಿಕಾರ.–** ಸಕ್ಷಮ ಪ್ರಾಧಿಕಾರವು, ಕೇಂದ್ರ ಸರ್ಕಾರದ ಅಥವಾ ಸಂದರ್ಭಾನುಸಾರ, ರಾಜ್ಯ ಸರ್ಕಾರದ ಪೂರ್ವಾನುಮೋದನೆ ಪಡೆದು ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಗಳಿಗಾಗಿ ಉಪಬಂಧ ಕಲ್ಪಿಸುವುದು ವಿಹಿತವಾಗಿರುವ ಎಲ್ಲ ವಿಷಯಗಳಿಗೆ ಉಪಬಂಧ ಕಲ್ಪಿಸಲು, ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅಸಂಗತವಾಗಿರದಂಥ ವಿನಿಯಮಗಳನ್ನು ರಚಿಸಬಹುದು.

**28. ಅಧಿಸೂಚನೆ ಮತ್ತು ನಿಯಮಗಳನ್ನು ಸಂಸತ್ತಿನ ಮುಂದೆ ಇಡುವುದು.–** ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆ ಮತ್ತು ರಚಿಸಿದ ಪ್ರತಿಯೊಂದು ನಿಯಮವನ್ನು ಹಾಗೂ ಸಕ್ಷಮ ಪ್ರಾಧಿಕಾರವು ರಚಿಸಿದ ಪ್ರತಿಯೊಂದು ವಿನಿಯಮವನ್ನು ಅದನ್ನು ಹೊರಡಿಸಿದ ಅಥವಾ ರಚಿಸಿದ ತರುವಾಯ, ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನವು ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ಅಧಿಸೂಚನೆಯಲ್ಲಿ ಅಥವಾ ನಿಯಮದಲ್ಲಿ ಅಥವಾ ವಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ಅಧಿಸೂಚನೆ ಅಥವಾ ನಿಯಮ ಅಥವಾ ವಿನಿಯಮವನ್ನು ರಚಿಸಕೂಡದೆಂದು ಉಭಯ ಸದನಗಳೂ ಒಪ್ಪಿದರೆ, ಆ ಅಧಿಸೂಚನೆ ಅಥವಾ ನಿಯಮ ಅಥವಾ ವಿನಿಯಮವು ಆ ತರುವಾಯ, ಸಂದರ್ಭಾನುಸಾರ, ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದತೆಯು ಆ ಅಧಿಸೂಚನೆ ಅಥವಾ ನಿಯಮ ಅಥವಾ ವಿನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.

**29. ರಾಜ್ಯ ಸರ್ಕಾರವು ಹೊರಡಿಸಿದ ಅಧಿಸೂಚನೆ ಮತ್ತು ರಚಿಸಿದ ನಿಯಮಗಳನ್ನು ರಾಜ್ಯ ವಿಧಾನಮಂಡಲದ ಮುಂದೆ ಇಡುವುದು.–** ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಪ್ರತಿಯೊಂದು ಅಧಿಸೂಚನೆ ಮತ್ತು ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಅಥವಾ ಸಕ್ಷಮ ಪ್ರಾಧಿಕಾರವು ರಚಿಸಿದ ಪ್ರತಿಯೊಂದು ವಿನಿಯಮವನ್ನು, ಅದನ್ನು ಹೊರಡಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಮುಂದೆ ಇಡತಕ್ಕದ್ದು.

**30. ತೊಂದರೆಗಳನ್ನು ನಿವಾರಿಸುವ ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಾಗ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಆದೇಶದ ಮೂಲಕ ತೊಂದರೆಯನ್ನು ನಿವಾರಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಮೂರು ವರ್ಷಗಳ ಅವಧಿಯು ಮುಕ್ತಾಯದ ತರುವಾಯ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**31. ನಿರಸನ ಮತ್ತು ಉಳಿಸುವಿಕೆಗಳು.–** (1) ದಿನಾಂಕ 29ನೇ ಏಪ್ರಿಲ್, 2004ರ ಸಮಸಂಖ್ಯೆ ಠರಾವು ತಿದ್ದುಪಡಿ ಮಾಡಿದಂತೆ ಭಾರತ ಸರ್ಕಾರ, ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆಗಳ ಮತ್ತು ನಿವೃತ್ತಿ ವೇತನಗಳ (ಪಿಂಚಣಿ) ಮಂತ್ರಾಲಯದ (ಸಿಬ್ಬಂದಿ ಮತ್ತು ತರಬೇತಿ ಇಲಾಖೆ) ಠರಾವು ಸಂಖ್ಯೆ 371/12/2002–ಎವಿಡಿ–III ದಿನಾಂಕ 21ನೇ ಏಪ್ರಿಲ್, 2004 ಅನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನ ಏನೇ ಇದ್ದರೂ, ಸದರಿ ಠರಾವಿನ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೇರೆಗೆ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

********

ಡಾ. ರಾಜೀವ್ ಮಣಿ

ಭಾರತ ಸರ್ಕಾರದ ಕಾರ್ಯದರ್ಶಿ

Dr. Rajiv Mani
Secretary to Government of India

15-05-2025

X Shakuntala Mohan

Shakuntala mohan
Administrative Officer
Signed by: SHAKUNTALA MOHAN